

# ಶ್ರೀಗೋದಾಕಲ್ಯಾಣಮ್

(श्रीगोदाकल्याणम्)



॥ ಶ್ರೀಃ ॥

॥ ಶ್ರೀಮತೇ ರಾಮಾನುಜಾಯ ನಮಃ ॥



# ಶ್ರೀಗೋದಾಕಲ್ಯಾಣಮ್

(श्रीगोदाकल्याणम्)

With complements
To Sri. Gagan.
M N Ramanuja
23/9/2011


**Ayee Narasimhan**

**Jananyacharya Indological Research Foundation**

# 116, Sreesanudasa Nilayam, 15th Cross, AECS Layout,
Sanjaynagar, RMV 2nd Stage, Bengaluru- 560 094 , India.
Hand Phone : 098450 13393 email : ayeenarasimhan@gmail.com,
www.srivaishnavan.com

Sri Andal Kalyanam - A poetry of hymns describing the marriage of the Dravidian Saint Sri Andal. Kannada translation provided by Dr.M.N.Ramanuja.

Edition : 2010

Pages ix + 50

Price : INR 70/-
USD 3

Copies available at : **Jananyacharya Indological Research Foundation**
# 116, Sreesanudasa Nilayam, 15th Cross,
AECS Layout, Sanjaynagar, RMV 2nd Stage,
Bengaluru- 560 094 , India.
Hand Phone : 098450 13393
email : ayeenarasimhan@gmail.com

Printed at : **M/s. Sri Srinidhi Printer**
# 3732, 1st Main Road,
Gayatrinagar,
Bengaluru - 560 021
Ph : 98447 57752

# FOREWORD

Sri

Srimathe Ramanujaya Namaha

The basis of any study related to the spiritual science is the three realities the Tattva, Hita and the Purusartha. The Tattva and Hita according to Srivaishnava doctrine is the Supreme Brahman or the Purusottama himself. The Purusartha being diverse is described in the Sastras as Dharma, Artha, Kama and Moksa and Moksa(Kainkarya to Brahman) is referred to as the parama Purusartha being the supreme goal desired by Souls. Thiruvarangatamudanar chants in his Ramanuja Nootrandadi referring to Sri Ramanuja quoting Kama to be more superior than the other Purusarthas.

***sEmanalveeDum poruLum darumamum * Seeriyanal***
***kAmamum enrivai nAngenbar * nAnginum kaNNaNukkE |***
***AmadukAmam aramporuL veeDidarkku enruraittAn***
***vAmanan Seelan* irAmAnusan inda maNmisaiyE ||***

*Ramanuja Nootrandadi. 40*

Tirumangai Azhwar (Periya Tirumadal 10,11) says ***'ammaraitAn mannum aram poruL inbam veeDenru ulahil nanneri mEmabaTTana nAngurE'***- these are the four Purusarthas as revealed in the Sastras, of these Kama means Bagavat Kama—perinbam. The worldly desires are called cittrinbam as they are alpa and asthira. So they don't desired to be called Purusarthas. ***"kaNNaNukkE AmadukAmam"****(R.Nootrandadi.40)*— Kama is to be eschewed if it is towards worldy vishayas, but here Kama is towards Kannapirran. Bagavadvishaya Kama is approved by Sastra too. Azhwar's Sree sooktis confirm that this Kama leads to Bhakti which they enjoined with God.

The other three Puruasarthas—Dharma, Artha and Moksha depend on Kama alone. (Bagavat Kama alone is pradhana Purusartha (primary). Tirumangai Azhwar(Periya Tirumadal 37,38) says ***'kAmattin mannum vazhi muraiyE niTTrum nAm'***, Dharma and Artha are not independent since the result of both is only Kama, hence they are paratah Purusartha, Moksha is swatah Purusartha but it also aims at Bagavadanubava (which is what we call Kama). Hence Kama alone is pradhana Purusartha.

This when explored shows that the mystic or the devotional mysticism of the Dravidian Saints and Poorvacharyas in the Srivaishnava lineage expounding Bhakti or Bhagavat prema as the essence leads to His Kainkarya. This mysticism further matures to Bridal mysticism – with Lord being the only Purusa and all the Souls equated to women, hence the Lord is the true husband to all the souls- more so referred as an immediate communion between the human soul and the Soul of the world. The Bhakti schools fully expose mystic bliss explaining the devotional dedication and the intuitive awakening of the Azhwars clearly elaborating this bridal mysticism sharing their experiences in the form of their outpourings - the Nalayira Divya Prabhandham. Periazhwar, father of Andal exposed his mystic experiences in his Periazhwar Thirumozhi and this had profound impact on his daughter Andal. The result of this was the compostion of her two Prabhandhams Thiruppavai and Nacchiar Thirumozhi.

The profound experiences and an intrinsic urgency to communicate makes mystics with their rich experiences of union with God strive hard to record them in the form of hymns sacred to the community in the lineage. The divine ecstasy provides them an opportunity to re-live their supreme moments, this union or the wedlock forms the fruitfulness of the soul. These features of bridal mysticism can be found in the impassioned outbursts of Saint Andal whose feminity made her unique against the other Azhwar Saints. Andal in her Nacchiar Thirumozhi(1.5) pleads in Samslesa and vislesa to the God of love to unite her with God. Her adoration to her Lord ripens to prema or Bhakti and pleads for immediate union with Him.

One unique feature in the Epistemology of Srivaishnavism is the acceptance of Nalayira Divya Prabhandham of the Dravidian Saints or the Azhwars as a valid and indisputable pramana equal to the Vedas. Parasara Bhattar, Acharya who lived in the period of Ramanuja refers to this Tamil Veda as **"Dravidee Brahmasamhitaa"**, Vedanta Desikar **quotes** in his Dramidopanishad Tatparya Ratnavazhi that Thiruvoymozhi of Swami Nammazhwar as **"Samhitaasaarvabhoumee"** and **"Sarvaarthasaakha"** – Emperor of theSamhita and Veda Sakha for all. The Churnika of Azhagiya Manavala Perumal Nayanar in Acharya Hrudayam **"Idu kondu sutra vaakyangalai urungaviduvar"** further establishes the status Thiruvoymozhi held, for Sri Ramanuja referred these compositions while commenting on the Brahma Sutras bridging the union of Dravidian and Samskrit Vedanta.

This brings in a strong foot print of the Dravidian literature in the list of the Veda Vedanta literature. This present text 'Sri Goda Kalyanam' is the literature in Samskrit expounding the bridal mysticism of a Dravidian Saint Andal whose urge to union with God resulted in her celebrating the wedding with the Lord of Srirangam Sri Ranganatha. The Swayamvara of Andal and her desire to union is established in this text supplemented by the tenets of Bridal mysticism and this ritual time and again celebrated is an occasion to re-live the experiences of Andal. The work confers all the four Purusarthas desired by souls and this work I believe should add to the collection of the Srivaishnava texts at large. This text is not a abstract creation but a composition extracted from texts of Poorvacharyas like Prapannamrutha, Divya Suri Charitha and others with pearls like Slokas decorated into a garland. I do sincerely hope this book will find its way to those who admire Indian philosophy and the tenets of Sri Ramanujacharya.

It is my binding duty to thank all those responsible for this publication. It is my immediate duty to thank Sri.M.N.Ramanuja whose vast experience in the Dravidian and Samskrit literature has been reflected in his lucid translation. I thank him for his liberal support for otherwise this work would not have been possible. I should thank Smt Kanakavalli who inspired me to take up this publication. It gives me immense pleasure to thank Sri U. Ve. Areyar Srirama Sharma for his introduction. I should sincerely thank the dedicated community of Srivaishnavas who made this print edition possible - Sri.N.Rangarajan, Sri.J.Srinivasan and Sri.A.Rangaswamy Iyengar who voluntarily provided financial assistance and encouraged this publication. Lastly my sincere thanks to Sri Ravi of Srinidhi Printers in taking this forward through the press .

For and behalf of Jananyacharya Indological Research Foundation
**Ayee Narasimha Sreesanudasan**

॥ಶ್ರೀಃ॥

ಶ್ರೀಮತೇ ರಾಮಾನುಜಾಯ ನಮಃ

# ಮುನ್ನುಡಿ

ಕಲ್ಯಾಣಂ ಎಂದರೆ ಸಂಸ್ಕೃತದಲ್ಲಿ ಮಂಗಳಕಾರ್ಯ ಎಂದರ್ಥ. ಶ್ರೀ ಮತ್ತು ಸ್ತ್ರೀ ಇಬ್ಬರೂ ಸಮನಾದವರೆಂದು ಮಾನವರ ಮೂಲಪುರುಷ ಮನು ತಿಳಿಸಿರುವ ಮಾತು. "ಸ್ತ್ರಿಯಃ ಶ್ರಿಯಶ್ಚ ಗೇಹೇಷು ನ ವಿಶೇಷೋಽಸ್ತಿ ಕಶ್ಚನ" ಮನೆಯಲ್ಲಿ ಒಗ್ಗಟ್ಟಿಗೆ ಕಾರಣರಾದ ಸುಮಂಗಲಿ ಸ್ತ್ರೀಯರಿದ್ದರೆ, ಮನೆ ಸಕಲೈಶ್ವರ್ಯದಿಂದ ತುಂಬಿದಂತೆಯೇ. ಶ್ರೀದೇವಿಯ ನೆಲೆಮನೆಯಾಗುವುದು ನಮ್ಮ ಮನೆ ಎಂಬುದು ಮನುವಿನ ಮಾತಿನ ಭಾವ.

ಸ್ತ್ರೀಯರಿಗೆ ಜೀವನದಲ್ಲಿ ಏರ್ಪಡುವ ಒಂದು ಮಂಗಳಕಾರ್ಯವೆಂದರೆ ಅದೇ ಶಾಸ್ತ್ರೀಯವಾದ ಮದುವೆ. ಇದು ವರ ವಧುಗಳ ಮಾತ್ರವಲ್ಲ ಒಟ್ಟು ಕುಟುಂಬಗಳ ಗ್ರಾಮಗ್ರಾಮಗಳ ದೇಶದೇಶಗಳ ರಾಷ್ಟ್ರಗಳ ಒಗ್ಗಟ್ಟಿಗೆ ಮಾದರಿಯಾಗಿ ಕಾರಣವೂ ಆಗುವುದು.

ಸೀತಾಕಲ್ಯಾಣದಿಂದ ಕೋಸಲ ವಿದೇಹರಾಜ್ಯಗಳ ಸಂಬಂಧ ಐಕಮತ್ಯಗಳು ಭಾರತ ರಾಷ್ಟ್ರದ ಏಕತೆ ಸಮೃದ್ಧಿಗೆ ಕಾರಣ ವಾದವು. ರುಕ್ಮಿಣೀಕಲ್ಯಾಣದಿಂದ ಪಶ್ಚಿಮೋತ್ತರ ದಕ್ಷಿಣಭಾರತಗಳ ಸಂಬಂಧ ದೃಢವಾಯಿತು. ಹೀಗೆ ಗೋದಾಕಲ್ಯಾಣದಿಂದ ಪಾಂಡ್ಯಚೋಳರಾಜ್ಯಗಳ ಐಕಮತ್ಯ ಸಂಬಂಧ ಗಟ್ಟಿಯಾಯಿತು. ಭಕ್ತರ ಮತ್ತು ಭಗವಂತನ ಸಂಬಂಧ ಗಟ್ಟಿಯಾಯಿತು.

ಇದಿಷ್ಟೂ ಸ್ತ್ರೀ ಶಬ್ದದ ಒಳ ಅರ್ಥ. ಸ್ತ್ಯೈ = ಸಂಘಾತೇ ಎಂಬುದು ಈ ಶಬ್ದದ ಮೂಲಧಾತುಪಾಠ. 'ಸ್ತ್ಯಾಯತೇ ಅಸ್ಯಾಂ ಗರ್ಭಃ ಕುಟುಂಬಃ ಗ್ರಾಮಃ ರಾಜ್ಯಂ ರಾಷ್ಟ್ರಂ ವಿಶ್ವಂ ಚ' ಎಂಬ ವಿವರಣೆಯಂತೆ ಹೆಂಗಸಿನಲ್ಲಿ ಗರ್ಭವು ಸೇರಿ ಹೊಂದಿಕೆಯಾಗಿ ಗಟ್ಟಿಗೊಳ್ಳುವಂತೆಯೇ ಇವಳಲ್ಲಿ ಕುಟುಂಬ ರಾಜ್ಯ ಮುಂತಾದುವೂ ಒಂದಾಗಿ ಐಕಮತ್ಯದಿಂದ ಚೆನ್ನಾಗಿ ಬಾಳುವುವು ಎಂದರ್ಥ.

ಶ್ರೀ ಎಂದರೆ ಐಶ್ವರ್ಯ. ಲೌಕಿಕವಾಗಿ ಚರಸ್ಥಿರ ಆಸ್ತಿಗಳನ್ನೂ ಅಧಿಕಾರ ಸ್ಥಾನ ಬಲ ಮುಂತಾದುವನ್ನೂ ಐಶ್ವರ್ಯ ಎನ್ನುತ್ತೇವೆ. ಎಲ್ಲಕ್ಕಿಂತ ದೊಡ್ಡ ಐಶ್ವರ್ಯವು ಶಾಸ್ತ್ರೀಯ ತತ್ತ್ವಜ್ಞಾನ. ಇದು ಇಹ-ಪರಗಳೆರಡರಲ್ಲೂ ಸಮೃದ್ಧಿ ಸಂತೋಷಗಳನ್ನು ಉಂಟುಮಾಡುತ್ತದೆ. ವೇದಶಾಸ್ತ್ರೇತಿಹಾಸ ಪುರಾಣಾಗಮ ಜಾನಪದ ಗೀತೆ ಗಾದೆ ವಚನಗಳೆಲ್ಲಕ್ಕೂ 'ಶ್ರೀ' ಎಂದೇ ಹೆಸರು. ತೈತ್ತಿರೀಯ ಆರಣ್ಯಕವು 'ಸಾ ಹಿ ಶ್ರೀರಮೃತಾ ಸತಾಂ' ಮೇಲೆ ತಿಳಿಸಿದ ಎಲ್ಲವೂ ಕೂಡ ಸಜ್ಜನರ ಶಾಶ್ವತ ಮಧುರ ಐಶ್ವರ್ಯ ಎಂದು ತಿಳಿಸುತ್ತದೆ.

ಈ ಎಲ್ಲದರ ಅಧಿದೇವತೆ ಶ್ರೀದೇವಿ ಮಹಾಲಕ್ಷ್ಮಿಯು ಆಂಡಾಳ್ ಎಂಬ ಗೋದಾದೇವಿಯಾಗಿ ಈ ಭೂಮಿಯಲ್ಲಿ ಅವತರಿಸಿ ಶ್ರೀ ಕೃಷ್ಣನನ್ನೇ ವರಿಸಬೇಕೆಂದು ಹಾಡಿ ಕಾಡಿ ಬೇಡಿ ಅವನ ರೂಪವೇ ಆದ ಶ್ರೀರಂಗನಾಥನನ್ನೇ ವರಿಸಿ ಕಲ್ಯಾಣವತಿಯಾದವಳು. ಎಲ್ಲರಿಗೂ ಭಗವತ್ ತತ್ತ್ವಜ್ಞಾನಭಕ್ತಿ ಪರಿಪಕ್ವತೆಯನ್ನು ಕರುಣಿಸಿ ವಿಷ್ಣುಭಕ್ತರನ್ನೆಲ್ಲ ಒಗ್ಗೂಡಿಸಿ ಪ್ರಾಚೀನ ಆಳ್ವಾರ್‌ಗಳೆಂಬ ವಿಷ್ಣುಭಕ್ತರೆಲ್ಲರ ಒಂದು ಸಮೂಹಕ್ಕೆ ಪ್ರತಿನಿಧಿಯಾಗಿ ನಿಂತಳು. ಹೀಗೆ ಗೋದಾದೇವಿಯು ಸ್ತ್ರೀ ಹಾಗು ಶ್ರೀಯಲ್ಲವೇ? ಇವಳ ತಿರುಪ್ಪಾವೈ ಶಂಗತ್ತಮಿಳ್‌ಮಾಲೆ ಎಲ್ಲ ವಿಧ ಭಗವದ್ ಭಕ್ತರನ್ನು ಒಂದೆಡೆ ಸೇರಿಸುವ ಸಂಘ ಸಾಹಿತ್ಯ.

ಇಂತಹ ಗೋದಾದೇವಿಯ ಕಲ್ಯಾಣವನ್ನು ಮನೆಮನೆಗಳಲ್ಲೂ ಗುಡಿಗುಡಿಗಳಲ್ಲೂ ನೆರವೇರಿಸಿದವರಿಗೆ ಸಕಲಸನ್ಮಂಗಳಗಳೂ ಅನಾಯಾಸವಾಗಿ ಸಿದ್ಧಿಸುತ್ತವೆ ಎಂಬುದು ಈ ಗೋದಾ ಕಲ್ಯಾಣಗ್ರಂಥದ ಫಲಸಂಚಯ.

ಈ ಗ್ರಂಥದ ವಿಷಯವನ್ನು ಪೂರ್ವಾಚಾರ್ಯ ಪರಂಪರೆಯಿಂದ ಕೇಳಿತಿಳಿದು ರಮ್ಯವಾಗಿ ವಿವರಿಸಿ ಹೇಳಿದವರು ಶ್ರೀ ರಾಮಾನುಜರ ಶಿಷ್ಯರೂ ಅವರಿಗೆ ಅನಂತರದಲ್ಲಿ ಆಸೇತುಹಿಮಾಚಲ ಸಕಲ ಶ್ರೀವೈಷ್ಣವರಿಗೂ ಆಚಾರ್ಯರಾಗಿದ್ದ ಭಟ್ಟಪರಾಶರರು. ಇವರೂ ಕೂರೇಶರ ಪುತ್ರರು, ಸರ್ವಜ್ಞರು, ಹಿರಿಯ ಯೋಗಿ, ಶಾಸ್ತ್ರವ್ಯಾಖ್ಯಾನ ಕಾವ್ಯಸ್ತೋತ್ರಾದಿಗಳನ್ನು ಅನೇಕವಾಗಿ ರಚಿಸಿದವರು. ಇವರ ಪ್ರಧಾನ ಶಿಷ್ಯರು ನಂಜೀಯರ್ ಎಂಬ ಮಾಧವಮುನಿಯವರು. ಇವರು ಕರ್ನಾಟಕದ ಎಡೆಹಳ್ಳಿ ಮತ್ತು ಕೂಡಲಿ ಕ್ಷೇತ್ರದಲ್ಲಿ ವಿರಾಜಮಾನರಾಗಿದ್ದ ಅಪ್ರತಿಮ ವಿದ್ವಾಂಸರು. ಪರಾಶರ ಭಟ್ಟರ ವಿದ್ವತ್ತಿಗೆ ಗುಣಗಳಿಗೆ ಮನಸೋತು ಅವರ ಶಿಷ್ಯರಾದರು. 'ಅಸ್ಮದ್ ಯತಿ' ನಮ್ಮ ಸನ್ಯಾಸಿಗಳು ಎಂದು ಗುರುವಿನ ಅನುಗ್ರಹಕ್ಕೆ

ಪಾತ್ರರಾದವರು.

ಈ ಕನ್ನಡ ನಾಡಿನ ನಂಜೀಯರಿಗೆ ಪರಾಶರ ಭಟ್ಟರು ಉಪದೇಶಿಸಿದ ಪೂರ್ವಾಚಾರ್ಯರ ಚರಿತ್ರ ಗ್ರಂಥವೇ 'ದಿವ್ಯಸೂರಿಪ್ರಭಾವದೀಪಿಕಾ' . ಇದು ಇಂದು ಸಿಗುತ್ತಿಲ್ಲ. ಆದರೆ ಇದರ ರೂಪಾಂತರ ಪ್ರಪನ್ನಾಮೃತ ಗ್ರಂಥ ಸಿಗುತ್ತಿದೆ.

ಪ್ರಪನ್ನಾಮೃತ ಬರೆದವರು ಕನ್ನಡನಾಡಿನ ಮಿರಿಲಾ ಸಾಲಿಗ್ರಾಮದ ಅನಂತಾರ್ಯರು. ಇವರು ರಾಮಾನುಜರ ಸಾಕ್ಷಾತ್ ಶಿಷ್ಯರಾಗಿದ್ದ ಆಂಧ್ರಪೂರ್ಣ ರೆಂಬ ವಡುಹನಂಬಿಯವರ ವಂಶದವರು. ಇದರಲ್ಲಿ ಇವರು ರಾಮಾನುಜರ ಚರಿತ್ರೆಗಳು ಹಿಂದಿನ ಆಳ್ವಾರುಗಳ ಚರಿತ್ರೆಗಳು ಎಲ್ಲವನ್ನೂ ಭಟ್ಟರು ನಂಜೀಯರವರಿಗೆ ಉಪದೇಶಿಸಿದ ಕ್ರಮದಲ್ಲೇ ಸರಳ ಸುಲಭ ರಮಣೀಯವಾಗಿ ಸಂಸ್ಕೃತಪುರಾಣ ಕಾವ್ಯಶೈಲಿಯಲ್ಲಿ ಬರೆದಿದ್ದಾರೆ. ರಾಮಾನುಜರ ಅನಂತರ ಬಂದ ತಮ್ಮ ಕಾಲದ ಶ್ರೀವೈಷ್ಣವಾಚಾರ್ಯರ ಚರಿತ್ರೆಗಳನ್ನು ತಿಳಿದು ಬರೆದಿದ್ದಾರೆ. ವಿಜಯನಗರದ ರಾಜ ಅಳಿಯ ರಾಮರಾಯನ ಕಾಲದಿಂದೀಚೆಗೆ ವೆಂಕಟಪತಿರಾಯನ ಗುರು ಕೋಟಿಕನ್ಯಾದಾನಂ ತಾತಾಚಾರ್ಯರೆಂಬವರ ವಂಶದಲ್ಲಿ ಅವರ ಮರಿಮಗ ರಂಗನಾಥಾಚಾರ್ಯರಲ್ಲಿ ಈ ಸಾಲಗ್ರಾಮದ ಅನಂತಾಚಾರ್ಯರು ವೇದಾಂತಾಧ್ಯಯನ ಮಾಡಿದವರು ಮತ್ತು ಮೈಸೂರು ರಾಜ ವಡಯರ ಕಾಲದಿಂದೀಚೆಗೆ ಕೌಶಿಕ ಗೋತ್ರದ ಕುಮಾಂಡೂರ್ ಇಳಯವಿಲ್ಲಿ ಅಳಸಿಂಗರಾರ್ಯರ ಪುತ್ರ ರಾಮಾನುಜಾರ್ಯರಿಂದ ಸಂಪ್ರದಾಯ ದೀಕ್ಷೆ, ರಹಸ್ಯ ಶಾಸ್ತ್ರಾರ್ಥ ವಿದ್ಯಾಭ್ಯಾಸ ಮಾಡಿದವರು, ದೊಡ್ಡದೇವರಾಜ ವಡಯರ ಕಾಲಕ್ಕೆ ಸ್ವಲ್ಪ ಪೂರ್ವದವರು. ಇದಿಷ್ಟು ಇವರ ಗ್ರಂಥ ಆರಂಭ, ಅಂತ್ಯ ಮತ್ತು ಇವರ ವಂಶದವರ ಚರಿತ್ರೆಗಳಿಂದ ತಿಳಿದುಬರುವುದು. ಇವರ ವಂಶದವರು ಈಗ ಬೆಂಗಳೂರು ಮೈಸೂರು ಚಿಕ್ಕಬಳ್ಳಾಪುರ ಕೋಲಾರ ಜಿಲ್ಲೆಗಳಲ್ಲಿ ಇರುವರು.

ಈ ಪ್ರಪನ್ನಾಮೃತ ಗ್ರಂಥದಿಂದ ಈ ಗೋದಾಕಲ್ಯಾಣ ಭಾಗವನ್ನು ಕನ್ನಡಕ್ಕೆ ಅನುವಾದಿಸಿ ಮೂಲದೊಡನೆ ಕೊಟ್ಟಿರುವುದು ಆಂಡಾಳ್ ದೇವಿಯ ಭಕ್ತರು ಸ್ವೀಕರಿಸಬಹುದಾದ ಮತ್ತು ಮಂಗಳ ಕಾರ್ಯಗಳಲ್ಲಿ ಬಳಸಬಹುದಾದ ಗ್ರಂಥ ಇದು.

ದೊಡ್ಡದೇವರಾಜ ವಡಯರ ಗುರುಗಳಾಗಿದ್ದ ಚಿಕ್ಕುಪಾಧ್ಯಾಯರು ಕನ್ನಡದಲ್ಲಿ 'ದಿವ್ಯಸೂರಿಚರಿತೆ' ಎಂಬ ಕಾವ್ಯ ಬರೆದಿದ್ದಾರೆ. ದಳವಾಯಿ ದೇವರಾಜಯ್ಯ

ನಂಜರಾಜಯ್ಯರ ಕಾಲದಲ್ಲಿ ಅಂಚೆಯ ರಾಯಸದ ವೆಂಕಟಾಚಾರ್ಯರೂ ವರದಾಚಾರ್ಯರೂ ನಡುಗನ್ನಡ ಗದ್ಯದಲ್ಲಿ ಅನಂತಾರ್ಯರ ಪ್ರಪನ್ನಾಮೃತವನ್ನು ಅನುವಾದಿಸಿದ್ದಾರೆ. ಹಳೆಯ ಹೊಸ ಮುದ್ರಣಗಳೂ ಆಗಿವೆ. ನಾಗಮಂಗಲದ ನರಸಿಂಹಾಚಾರ್ಯರು ಹೊಸಗನ್ನಡದಲ್ಲಿ ಅನುವಾದಿಸಿದ್ದಾರೆ. ಮೇಲುಕೋಟೆಯ ಮಹಾವಿದ್ವಾನ್ ಅಕ್ಕಾರಕ್ಕನಿ ಸಂಪತ್ಕುಮಾರಾಚಾರ್ಯರು ಪ್ರಪನ್ನಾಮೃತವನ್ನು ಸರಳ ಕನ್ನಡದಲ್ಲಿ ಯಥಾವತ್ತಾಗಿ ಅನುವಾದಿಸಿರುವರು. ಇದು ತಿರುಪತಿಯ 'ಸಪ್ತಗಿರಿ' ಪತ್ರಿಕೆಯಲ್ಲಿ ಹಿಂದೆಯೇ ಪ್ರಕಾಶಿತವಾಗಿದೆ.

ಪ್ರಕೃತ ಶ್ರೀಗೋದಾಕಲ್ಯಾಣಮ್ ಭಾಗವು ಪ್ರಪನ್ನಾಮೃತದಲ್ಲಿ ಅಮೃತಪುತ್ರಿಯಂತೆ ಭಗವಂತನಿಗೆ ಪ್ರಿಯತಮವಾಗಿದೆ.

ರಾಮಾನುಜರ ಸಾಕ್ಷಾತ್ ಶಿಷ್ಯರಾಗಿದ್ದ ಗರುಡವಾಹನಪಂಡಿತರೆಂಬ ಕಾಶ್ಯಪ ಶ್ರೀನಿವಾಸ ಕವಿಯ 'ದಿವ್ಯಸೂರಿಚರಿತೆ' ಸಂಸ್ಕೃತದ ಮಹಾಕಾವ್ಯವಾಗಿದೆ. ಅದರಲ್ಲಿ ಗೋದಾಕಲ್ಯಾಣ ಸರ್ಗವು ಇದಕ್ಕಿಂತ ರಮಣೀಯವೂ ವಿಸ್ತಾರವೂ ಆಗಿದೆ. ಪ್ರಪನ್ನಾಮೃತದಂತೆಯೇ ಇದೂ ಕೂಡ ಕನ್ನಡಕ್ಕೆ ಅನುವಾದವಾಗಿ ಪ್ರಕಾಶಿತವಾದರೆ, ಭಕ್ತರಿಗೂ ರಸಿಕರಿಗೂ ರಸಭೋಜನವಾದೀತು.

ಈ ಮುನ್ನುಡಿ ಬರೆಯಲು ಪ್ರೇರಿಸಿದವರಿಗೆ ಮತ್ತು ಗೋದಾಕಲ್ಯಾಣ ಅನುವಾದಿಸಿ ಪ್ರಕಾಶ ಪಡಿಸಿದವರಿಗೆ ನನ್ನ ಧನ್ಯವಾದ ಪೂರ್ವಕ ನಮನಗಳು.

ಇಂತು

ಮೇಲುಕೋಟೆ — ತಿರುನಾರಾಯಣಪುರಂ ಅರ್ಯೈಯರ್

ತಿರುವಾಡಿಪ್ಪೂರಂ — ಶ್ರೀರಾಮಶರ್ಮಾ ರಾಮಾನುಜದಾಸ

।।ಶ್ರೀಃ।।

ಶ್ರೀಮತೇ ರಾಮಾನುಜಾಯ ನಮಃ

# ಶ್ರೀಗೋದಾಕಲ್ಯಾಣವ್

**ಶ್ರೀಶೈಲೇಶದಯಾಪಾತ್ರಂ ಧೀಭಕ್ತ್ಯಾದಿಗುಣಾರ್ಣವವ್ ।**
**ಯತೀಂದ್ರಪ್ರವಣಂ ವನ್ದೇ ರಮ್ಯಜಾಮಾತರಂ ಮುನಿವ್ ।।೧।।**

ಶ್ರೀಶೈಲೇಶ ಎಂಬ ತಿರುವಾಯ್ಮೊಳಿಪ್ಪಿಳ್ಳೈ ಅವರ ದಯೆಗೆ ಪಾತ್ರರಾಗಿಯೂ ಜ್ಞಾನಭಕ್ತಿವೈರಾಗ್ಯಗಳ ಸಾಗರರಾಗಿಯೂ ಯತೀಂದ್ರರಾದ ರಾಮಾನುಜಾಚಾರ್ಯರಲ್ಲಿ ಪ್ರವಣರೂ ಆದ ರಮ್ಯಜಾಮಾತೃಮುನಿಯಾದ ಮಣವಾಳಮಹಾಮುನಿಗಳನ್ನು ವಂದಿಸುವೆನು.

**ದೇವಸ್ಯ ಮಹಿಷೀಂ ದಿವ್ಯಾಮಾದೌ ಗೋದಾಮುಪಾಸ್ಮಹೇ ।**
**ಯನ್ಮೌಲಿಮಾಲಿಕಾಂ ಪ್ರೀತ್ಯಾ ಸ್ವೀಕರೋತಿ ಸ್ವಯಂ ಪ್ರಭುಃ ।।೨।।**

ಯಾರ ಮೌಳಿಯಲ್ಲಿ ಧರಿಸಿದ ಮಾಲೆಯನ್ನು ಸ್ವಯಂ ದೇವರೇ ಪ್ರೀತಿಯಿಂದ ಸ್ವೀಕರಿಸುವರೋ, ದೇವರ ಆ ದಿವ್ಯ ಮಹಿಷಿಯಾದ ಗೋದೆಯನ್ನು ಆದಿಯಲ್ಲಿ ಉಪಾಸಿಸೋಣ.

**ಶುಚಿಮಾಸಿ ಪಾಂಡ್ಯಭುವಿ ಪೂರ್ವಫಲ್ಗುನೀ**
**ಘನಭೇ ನವೀನತುಳಸೀವನಾನ್ತರಾತ್ ।**
**ಉದಿತಾಮುದಾರಗುಣರಙ್ಗನಾಯಕ**
**ಪ್ರಿಯವಲ್ಲಭಾಂ ವಸುಮತೀಮುಪಾಸ್ಮಹೇ ।।೩।।**

ಆಷಾಢಮಾಸದಲ್ಲಿ ಪೂರ್ವಫಲ್ಗುನೀ ನಕ್ಷತ್ರದಲ್ಲಿ ಹುಲುಸಾದ ತುಳಸೀ ತೋಟದೊಳಗೆ ಉದಿಸಿದ (ಅವತರಿಸಿದ) ಉದಾರಗುಣೆಯಾದ ರಂಗನಾಯಕನ ಪ್ರಿಯವಲ್ಲಭೆಯಾದ ಭೂದೇವಿಯನ್ನು ಉಪಾಸಿಸೋಣ.

ನೀಳಾತುಙ್ಗಸ್ತನಗಿರಿತಟೀ ಸುಪ್ತಮುದ್ಬೋಧ್ಯ ಕೃಷ್ಣಮ್ ।
ಪಾರಾರ್ಥ್ಯಂ ಸ್ವಂ ಶ್ರುತಿಶತಶಿರಸ್ಸಿದ್ಧಮಧ್ಯಾಪಯನ್ತೀ ॥
ಸ್ವೋಚ್ಛಿಷ್ಟಾಯಾಂ ಸ್ರಜಿನಿಗಳಿತಂ ಯಾ ಬಲಾತ್ಕೃತ್ಯ ಭುಙ್ಕ್ತೇ
ಗೋದಾ ತಸ್ಯೈ ನಮ ಇದಮಿದಂ ಭೂಯ ಏವಾಸ್ತುಭೂಯಃ॥ ೪ ॥

ನೀಳಾದೇವಿಯ ತುಂಗವಾದ ಸ್ತನಗಿರಿಗಳ ತಟದಲ್ಲಿ ಪವಡಿಸಿದ್ದ ಕೃಷ್ಣನನ್ನು ಎಬ್ಬಿಸಿ ನೂರಾರು ವೇದಾಂತಗಳಲ್ಲಿ ಸಿದ್ಧವಾದ ತನ್ನ ಪಾರಾರ್ಥ್ಯ (ಕೃಷ್ಣನಿಗಾಗಿಯೆ ಇರುವಿಕೆ–ಪಾರತಂತ್ರ್ಯ)ವನ್ನು ಕೃಷ್ಣನಿಗೆ ಬೋಧಿಸುತ್ತ, ತಾನು ಮುಡಿದು ಉಚ್ಛಿಷ್ಟವಾದ ಮಾಲೆಯಿಂದಲೇ ಬಂಧಿಸಿದ ಕೃಷ್ಣನನ್ನು ಬಲಾತ್ಕರಿಸಿ ಭೋಗಿಸುವ ಆ ಗೋದಾದೇವಿಗೆ ಇದೋ ನಮನವು, ಇದೋ ನಮನವು, ಮತ್ತೆ ಮತ್ತೆಯೂ ನಮನವಿರಲಿ.

ವೈಕುಣ್ಠೇ ತು ಪರೇ ಲೋಕೇ ಭಗವಾನ್ ಪರಮಃ ಪುಮಾನ್
ಆಸ್ತೇ ಲಕ್ಷ್ಮ್ಯಾ ಚ ಭೂಮ್ಯಾ ಚ ಭಕ್ತೈರ್ಭಾಗವತೈಸ್ಸಹ॥೫॥

ಪರಲೋಕವಾದ ವೈಕುಣ್ಠದಲ್ಲಿ ಪರಮಪುರುಷನು ಲಕ್ಷ್ಮೀದೇವಿ ಭೂದೇವಿಯರೊಡಗೂಡಿ ಭಕ್ತರಿಂದಲೂ ಭಾಗವತರಿಂದಲೂ ಸಹಿತನಾಗಿ ವಿರಾಜಿಸುತ್ತಿರುವನು.

ಅಸ್ಯೇಶಾನಾ ಹಿ ಜಗತೋ ವಿಷ್ಣುಪತ್ನೀ ಸನಾತನೀ
ಸಾ ಕದಾಚಿಜ್ಜಗನ್ಮಾತಾ ಸದಯಾ ವಿಷ್ಣುವಲ್ಲಭಾ ॥೬॥
ಅಪಾರಭವವಾರಾಶಿನಿಮಗ್ನಾನ್ ಭೃಶದುಃಖಿತಾನ್
ಬದ್ಧಾನ್ ವಿಲೋಕ್ಯ ದುಃಖೇನ ಭರ್ತಾರಮಿದಮಬ್ರವೀತ್ ॥೭॥

ವಿಷ್ಣುಪತ್ನಿಯು ಈ ಜಗತ್ತಿಗೆ ಯಜಮಾನಿಯೂ ಸನಾತನಿಯೂ ಆಗಿರುವಳು. ಒಮ್ಮೆ ಜಗನ್ಮಾತೆಯಾದ ವಿಷ್ಣುವಲ್ಲಭೆಯು ದಯಾಪೂರಿತಳಾಗಿ ಈ ಅಪಾರವಾದ ಭವಸಾಗರದಲ್ಲಿ ಮುಳುಗಿ ಅತಿದುಃಖಿತರಾದ ಬದ್ಧಜೀವಗಳನ್ನು ಕಂಡು ದುಃಖಿತಳಾಗಿ ಪತಿಯನ್ನು ಕುರಿತು ಇಂತೆಂದಳು.

ಯದಿ ದತ್ತಾ ತ್ವಯಾನುಜ್ಞಾ ಲೋಕಸಂರಕ್ಷಣೇ ಮಮ
ಲೀಲಾಯಾಮವತೀರ್ಯಾಹಂ ನಿತ್ಯೈಸ್ಸಿದ್ಧೈಸ್ಸಹೇಶ್ವರ ।
ತ್ವದಂಘ್ರಿಪದ್ಮಾಭಿಮುಖಾನ್ ಕರಿಷ್ಯೇ ತ್ವತ್ಪ್ರಸಾದತಃ
ಬದ್ಧಜೀವಾನಿಮಾನ್ ಸರ್ವಾನ್ ತ್ವದಾಜ್ಞಾಪರಿಪಾಲಿನೀ ॥೮॥

ಲೋಕಸಂರಕ್ಷಣೆಗಾಗಿ ನಿನ್ನಿಂದ ನನಗೆ ಅನುಮತಿಯು ದೊರಕಿದ ಪಕ್ಷದಲ್ಲಿ, ನಿನ್ನ ಆಜ್ಞೆಯನ್ನು ಪರಿಪಾಲಿಸುವಂಥಾವಳಾಗಿ ನಿತ್ಯಸೂರಿಗಳೊಂದಿಗೂ ಸಿದ್ಧರೊಂದಿಗೂ ಒಡಗೂಡಿ ಆ ಲೀಲಾವಿಭೂತಿಯಲ್ಲಿ ಅವತರಿಸಿ ಬದ್ಧಜೀವಿಗಳಾದ ಭೂಲೋಕವಾಸಿಗಳನ್ನು ನಿನ್ನ ಪ್ರಸಾದದಿಂದ ಸರ್ವೇಶ್ವರನಾದ ನಿನ್ನ ಅಡಿದಾವರೆಗೆ ಅಭಿಮುಖರನ್ನಾಗಿ ಪರಿವರ್ತಿಸುವೆನು.

**ವಾಕ್ಯಂ ನಿಶಮ್ಯ ನಿಪುಣಂ ಹರಿರಿನ್ದಿರಾಯಾ:**
**ಸಞ್ಚಿನ್ತ್ಯ ತತ್ರ ಸಮಯೇ ಘಟಸಂಭವಾಯ ॥೯॥**
**ದತ್ತಂ ವರಂ ಹೃದಿ ನಿಧಾಯ ಜಗಜ್ಜನನ್ಯೈ**
**ಲೋಕಾವನಾಯ ಮಹತೀಂ ಪ್ರದದಾವನುಜ್ಞಾಮ್ ॥೧೦॥**

ಮಹಾಲಕ್ಷ್ಮಿಯ ಶುಭವಾದ ವಾಕ್ಯವನ್ನು ಆಲಿಸಿದ ಹರಿಯು, ಆ ಮೊದಲು ಅಗಸ್ತ್ಯಮುನಿಗೆ ಒಪ್ಪಂದದಲ್ಲಿ ಕೊಟ್ಟಿದ್ದ ವರವನ್ನು ನೆನೆಸಿ ಹೃದಯದಲ್ಲಿ ಇಟ್ಟುಕೊಂಡು ಜಗಜ್ಜನನಿಗೆ ಲೋಕರಕ್ಷಣೆಯನ್ನು ಮಾಡಲು ಮಹತ್ತಾದ ಅನುಮತಿಯನ್ನು ನೀಡಿದನು.

**ವನಮಾಲಾಂ ವೈಜಯನ್ತೀಂ ತಥಾ ಪಞ್ಚಾಯುಧಾನಿ ಚ**
**ಶ್ರೀವತ್ಸಂ ಕೌಸ್ತುಭಂ ಚೈವ ಸೇನೇಶವಿಹಗೇಶ್ವರೌ ॥೧೧॥**
**ಅನನ್ತಪ್ರಮುಖಾನ್ ಸರ್ವಾನ್ ಸಮಾದಾಯಾಜ್ಞಯಾ ಹರೇ:**
**ಲೋಕಸಂರಕ್ಷಣಾರ್ಥಾಯ ಲಕ್ಷ್ಮೀರ್ಭೂರ್ವ್ಯಾಂ ಮನೋ ದಧೌ॥೧೨॥**

ವೈಜಯಂತಿ ಎಂಬ ವನಮಾಲೆಯನ್ನು ಹಾಗೂ ಪಂಚಾಯುಧಗಳನ್ನು, ಶ್ರೀವತ್ಸವೆಂಬ ಮಚ್ಚೆಯನ್ನು, ಕೌಸ್ತುಭವೆಂಬ ಮಣಿಯನ್ನು ಸೇನಾಪತಿಯಾದ ವಿಷ್ವಕ್ಸೇನರನ್ನು ವೈನತೇಯ ಅನಂತ ಪ್ರಮುಖರಾದ ಎಲ್ಲ ನಿತ್ಯಸೂರಿಗಳನ್ನೂ ಕರೆದುಕೊಂಡು ಬಂದು ಭೂಮಿಯಲ್ಲಿ ಲೋಕಸಂರಕ್ಷಣಾರ್ಥವಾಗಿ ಅವತರಿಸಲು ಲಕ್ಷ್ಮಿಯು ಮನಸ್ಸಿನಲ್ಲಿ ನಿಶ್ಚಯವನ್ನು ಮಾಡಿದಳು.

**ಅಥ ಮೇ ಕರ್ಷತ: ಕ್ಷೇತ್ರಂ ಲಾಂಗಲಾದುತ್ಥಿತಾ ಮಯಾ**
**ಕ್ಷೇತ್ರಂ ಶೋಧಯತಾ ಲಬ್ಧಾ ನಾಮ್ನಾ ಸೀತೇತಿ ವಿಶ್ರುತಾ॥೧೩॥**
**ಭೂತಲಾದುತ್ಥಿತಾ ಸಾ ತು ವ್ಯವರ್ಧತ ಮಮಾತ್ಮಜಾ**
**ಏವಂ ಜನಕರಾಜೇನ ಸೀತಾಯಾ ಜನ್ಮ ಭಾಷಿತಮ್ ॥೧೪॥**

ನಾನು ಯಜ್ಞಭೂಮಿಗಾಗಿ ಶೋಧಿಸಲು ಕ್ಷೇತ್ರವನ್ನು ಕೃಷಿಮಾಡುತ್ತಿದ್ದಾಗ ಭೂಮಿಯಿಂದ ಸ್ವಯಂ ಹೊರಬಂದ ಹೆಣ್ಣುಮಗಳು ನನಗೆ ಲಭಿಸಿದಳು. ಅವಳು ಸೀತೆಯೆಂದು ಪ್ರಸಿದ್ಧವಾದಳು. ಅವಳನ್ನು ನನ್ನ ಮಗಳಂತೆ ಬೆಳೆಸಿದೆನು. ಹೀಗೆಂದು ಸೀತೆಯ ಜನ್ಮವು ಜನಕ ಮಹಾರಾಜನಿಂದ ವರ್ಣಿಸಲ್ಪಟ್ಟಿತು.

**ತಥೈವ ಗೋದಾ ತುಲಸೀವನಭೂಮೌ ತಥಾಜನಿ**
**ತಸ್ಮಿನ್ ಖನಿತ್ರವಕ್ತ್ರೇಣ ವಿಷ್ಣುಚಿತ್ತೇ ಮಹಾತ್ಮನಿ ॥೧೫॥**
**ತುಲಸೀವೃಕ್ಷಮೂಲಸ್ಯ ಖನನಂ ಚ ಪ್ರಕುರ್ವತಿ**
**ತಾಂ ದೃಷ್ಟ್ವಾ ವಿಸ್ಮಯಾದ್ಬಾಲಾಂ ವಿಷ್ಣುಚಿತ್ತಃ ಪ್ರಹರ್ಷಿತಃ॥೧೬॥**
**ಆದಾಯ ಗೃಹಮಾಗಮ್ಯ ಗೋದಾಂ ಕೃತ್ವಾ ಸ್ವಪುತ್ರಿಕಾಮ್**
**ಗೋದೇತಿ ನಾಮಕರಣಂ ಚಕಾರ ದುಹಿತುಸ್ತದಾ ॥೧೭॥**

ಅದೇ ರೀತಿಯಲ್ಲಿ ಮಹಾತ್ಮನಾದ ವಿಷ್ಣುಚಿತ್ತನು ಪಿಕಾಸಿಯಿಂದ ತುಳಸೀ ವೃಕ್ಷದ ಮೂಲವನ್ನು ಅಗೆಯುತ್ತಿರುವಾಗ ತುಳಸೀವನದಲ್ಲಿ ಗೋದಾ ದೇವಿಯು ಜನಿಸಿದಳು. ಆ ಬಾಲೆಯನ್ನು ನೋಡಿ ವಿಸ್ಮಿತನಾದ ವಿಷ್ಣುಚಿತ್ತನು ಪ್ರಹರ್ಷಿತನಾಗಿ, ಅವಳನ್ನು ಎತ್ತಿಕೊಂಡು ತನ್ನ ಮನೆಗೆ ಬಂದು ಅವಳನ್ನು ತನ್ನ ಮಗಳಾಗಿ ಪರಿಗಣಿಸಿ ಗೋದೆ ಯೆಂದು ನಾಮಕರಣ ಮಾಡಿದನು.

**ಸಿದ್ಧಾನಾಂ ಶರದಾಂ ಕಲಾವಪಗವೇ ವರ್ಷೇ ನಳಾಖ್ಯೇ ರವೌ**
**ಯಾತೇ ಕರ್ಕಟಕಂ ವಿಧಾವುಪಚಿತೇ ಷಷ್ಠೇಽಹನಿ ಶ್ರೀಮತಿ ।**
**ನಕ್ಷತ್ರೇಽರ್ಯಮದೈವತೇ ಕ್ಷಿತಿಭುವೋ ವಾರೇ ಚತುರ್ಥ್ಯಾಂ ತಿಥೌ**
**ಗೋದಾ ಪ್ರಾದುರಭೂದಚಿಂತ್ಯಮಹಿಮಾ ಶ್ರೀವಿಷ್ಣುಚಿತ್ತಾತ್ಮಜಾ ॥೧೮॥**

ಕಲಿಯುಗದ ತೊಂಭತ್ತೇಳನೆಯ ವರ್ಷದಲ್ಲಿ ನಳಸಂವತ್ಸರದಲ್ಲಿ ಕರ್ಕಾಟಕ ಮಾಸದಲ್ಲಿ ಆರನೆಯ ತೇದಿಯಂದು ಶುಕ್ಲಪಕ್ಷದ ಚತುರ್ಥೀ ತಿಥಿಯಲ್ಲಿ, ಅರ್ಯಮ ದೈವತವಾದ ಪೂರ್ವಫಲ್ಗುಣೀ (ಪುಬ್ಬ) ತಾರೆಯಲ್ಲಿ ಮಂಗಳವಾರದಂದು ಅಚಿಂತ್ಯ ಮಹಿಮಳಾದ ಗೋದಾದೇವಿಯು ಶ್ರೀವಿಷ್ಣುಚಿತ್ತಾತ್ಮಜೆಯಾಗಿ ಜನಿಸಿದಳು.

**ಲಾಲಿತಾ ಪೋಷಿತಾ ನಿತ್ಯಂ ಪಿತೃಭ್ಯಾಂ ಪ್ರೇಮಪೂರ್ವಕಮ್**
**ವವೃಧೇ ಬಾಲಿಕಾ ಗೋದಾ ಪಿತ್ರೋರಾನನ್ದದಾಯಿನೀ ॥೧೯॥**
**ಬಾಲ್ಯಾತ್ಪ್ರಭೃತಿ ಸುಸ್ನಿಗ್ಧಾ ಸದಾಚಾರಸಮಾಶ್ರಯಾ**
**ವೈರಾಗ್ಯಜ್ಞಾನಭಕ್ತೀನಾಂ ಸೀಮಾಭೂಮಿರ್ಬಭೂವ ಸಾ ॥೨೦॥**

ತಾಯಿ ತಂದೆಯರ ಲಾಲನೆ ಪೋಷಣೆ ಆರೈಕೆಗಳಿಂದ ಬಾಲಿಕೆಯಾದ ಗೋದೆಯು ಬೆಳೆಯುತ್ತ ಬೆಳೆಯುತ್ತ ಅವರಿಗೆ ಆನನ್ದದಾಯಿನಿಯಾದಳು. ಬಾಲ್ಯದಿಂದ ಆರಂಭಿಸಿ, ಗೋದೆಯು ಸ್ನೇಹಪೂರ್ವಕವಾಗಿ ಸದಾಚಾರಾನುಷ್ಠಾನವನ್ನು ಮೈಗೂಡಿಸಿಕೊಂಡು ವೈರಾಗ್ಯಜ್ಞಾನಭಕ್ತಿಗಳ ಸೀಮಾಭೂಮಿಯಾದಳು.

**ಅಲಂಕಾರಪ್ರಿಯಾ ಬಾಲಾ ತಸ್ಯ ತಾ: ಪುಷ್ಪಮಾಲಿಕಾ:**
**ಜನಕಾಜ್ಞಾತವೃತ್ತಾನ್ತಾ ಸಾ ಧಮ್ಮಿಲ್ಲೇ ದಧೌ ರಹ: ॥೨೧॥**

ಅಲಂಕಾರಪ್ರಿಯೆಯಾದ ಆ ಬಾಲೆಯು ತಂದೆಯು ದೇವರಿಗಾಗಿ ಕಟ್ಟಿಟ್ಟಿದ್ದ ಪುಷ್ಪಮಾಲೆಗಳನ್ನು ಅವರಿಗೆ ಗೊತ್ತಾಗದಂತೆ ರಹಸ್ಯದಲ್ಲಿ ತನ್ನ ಜಡೆಯಲ್ಲಿ ಧರಿಸಿಕೊಂಡು ಇಟ್ಟುಬಿಡುತ್ತಿದ್ದಳು.

**ಕದಾಚಿದ್ವಿಷ್ಣುಚಿತ್ತೋಽಥ ಗೋದಾಯಾಸ್ತದ್ವಿಚೇಷ್ಟಿತಮ್**
**ವಿಲೋಕ್ಯ ಭೀತೋಽಪ್ಯಕೃತಕೋಪೋ ದುಹಿತೃವತ್ಸಲ: ॥೨೨॥**

ಒಂದು ಸಲ ವಿಷ್ಣುಚಿತ್ತರು ತಾವು ದೇವರಿಗಾಗಿ ಕಟ್ಟಿಟ್ಟಿದ್ದ ಮಾಲೆಗಳನ್ನು ಗೋದೆಯು ಮುಡಿದುಕೊಳ್ಳುವುದನ್ನು ನೋಡಿಬಿಟ್ಟು ಭಯಭೀತರಾಗಿ ಬಿಟ್ಟರು. ಆದರೂ ಮಗಳ ಮೇಲಿನ ವಾತ್ಸಲ್ಯದಿಂದ ಅವಳ ಮೇಲೆ ಕೋಪಗೊಳ್ಳದೆ ಆ ಉಚ್ಛಿಷ್ಟ ಮಾಲೆಗಳನ್ನು ವಿಷ್ಣುವಿಗೆ ಅರ್ಪಿಸದೆ ಬಿಟ್ಟುಬಿಟ್ಟರು.

**ತಾಸ್ತತೋ ವಿಷ್ಣವೇ ತತ್ರ ನಾರ್ಪಯಾಮಾಸ ಮಾಲಿಕಾ:**
**ಸ್ವಪ್ನೇ ಪ್ರಸನ್ನೋ ಭಗವಾನ್ ಭಟ್ಟನಾಥಂ ವಚೋಽಬ್ರವೀತ್॥೨೩॥**
**ಗೋದಯೈವ ಧೃತಾ ಮಾಲಾಸ್ಸುಗನ್ಧಾ ಮೇ ಹ್ಯತಿಪ್ರಿಯಾ:**
**ಧೃತಪೂರ್ವಾಸ್ತಯೈವೈತಾ ಮಾಲಿಕಾಸ್ಸಮ್ಯಗರ್ಪಯ ॥೨೪॥**

ಆಗ ಸ್ವಪ್ನದಲ್ಲಿ ಭಗವಂತನು ಪ್ರಸನ್ನನಾಗಿ ಬಂದು, ಭಟ್ಟನಾಥನಿಗೆ ಇಂತೆಂದು ಹೇಳಿದನು. ಗೋದೆಯು ಮುಡಿದುಕೊಂಡು ಕೊಟ್ಟ ಮಾಲೆಗಳೇ ನನಗೆ ಅತಿಸುಗಂಧವೂ ಅತಿಪ್ರಿಯವೂ ಆಗಿವೆ. ಆದ್ದರಿಂದ ಅವನ್ನೇ ನನಗೆ ಚೆನ್ನಾಗಿ ಅರ್ಪಿಸು ಎಂದು.

**ಆಮುಕ್ತಮಾಲ್ಯದಾ ನಾಮ ತಸ್ಯಾಸ್ತೇನಾಭವದ್ಭುವಿ**
**ಜ್ಞಾನಭಕ್ತ್ಯಾದಯಸ್ತಸ್ಯಾ ಗುಣಾ ವವೃಧಿರೇಽಧಿಕಮ್ ॥೨೫॥**

ವಿಸ್ಮಯಪಟ್ಟು ವಿಷ್ಣುಚಿತ್ತರು ದೇವರ ಆಜ್ಞೆಯನ್ನು ಶಿರಸಾ ವಹಿಸಿದರು. ಅದರಿಂದಲೇ ಗೋದೆಗೆ ಆಮುಕ್ತಮಾಲ್ಯದಾ ಶೂಡಿಕೊಡುತ್ತ ನಾಚ್ಚಿಯಾರ್ ಎಂದು

ಭೂಲೋಕದಲ್ಲಿ ಹೆಸರಾಯಿತು. ಮುಂದೆ ಹಾಗೆಯೇ ಅವಳ ಜ್ಞಾನಭಕ್ತ್ಯಾದಿಗಳು ಇನ್ನೂ ಅಧಿಕವಾಗಿ ವರ್ಧಿಸಿದವು.

**ಪತಿಸಂಯೋಗಸುಲಭಂ ಗೋದಾಯಾ ಯದ್ವಯಶ್ಶುಭಮ್**
**ದೃಷ್ಟ್ವಾ ತದಾ ವಿಷ್ಣುಚಿತ್ತ: ಚಿನ್ತಾಮಾಪ ದುರತ್ಯಯಾಮ್ ॥೨೬॥**

ಗೋದೆಯು ಬೆಳೆದು ಕನ್ಯೆಯಾದಾಗ, ಪತಿ ಸಂಯೋಗಕ್ಕೆ ಸೂಕ್ತವಾದ ಶುಭ ವಯಸ್ಸು ಹೊಂದಿದ್ದನ್ನು ನೋಡಿ ವಿಷ್ಣುಚಿತ್ತರಿಗೆ ಬಗೆಹರಿಸಲಾಗದ ಚಿಂತೆಯು ಹತ್ತಿಕೊಂಡಿತು.

**ತಂ ವ್ಯಾಕುಲಾನ್ತ:ಕರಣಂ ವಿಲೋಕ್ಯ ಪಿತರಂ ತದಾ**
**ವ್ಯಾಜಹಾರ ಶುಭಂ ವಾಕ್ಯಂ ಗೋದಾದೇವೀ ಹರಿಪ್ರಿಯಾ ॥೨೭॥**
**ಭಗವನ್ತಂ ವಿನಾ ನಾನ್ಯಂ ವೃಣೇऽಭೀಷ್ಟಂ ಪಿತಸ್ಸತೀ**
**ಮಾ ಶೋಕಂ ಕುರು ಧರ್ಮಜ್ಞ ಮದರ್ಥಂ ರಕ್ಷಕೋ ಹರಿ:॥೨೮॥**

ಹಾಗೆ ವ್ಯಾಕುಲಚಿತ್ತರಾದ ತಂದೆಯನ್ನು ನೋಡಿ ಹರಿಪ್ರಿಯೆಯಾದ ಗೋದೆಯು ಒಂದು ಶುಭವಾದ ವಾಕ್ಯವನ್ನು ಹೇಳಿದಳು. ತಂದೆಯೇ! ನಾನು ಭಗವಂತನನ್ನು ಬಿಟ್ಟು ಬೇರಾರನ್ನೂ ಅಭೀಷ್ಟವಾಗಿ ವರಿಸುವುದಿಲ್ಲವು. ಹೇ ಧರ್ಮಜ್ಞ! ನೀನು ನನ್ನ ಬಗ್ಗೆ ಏನೂ ಚಿಂತಿಸಬೇಡ ! ರಕ್ಷಕನಾದ ಹರಿಯು ಎಲ್ಲವನ್ನೂ ನೋಡಿಕೊಳ್ಳುವನು.

**ತಚ್ಛ್ರುತ್ವಾ ವಚನಂ ತಸ್ಯಾಸ್ಸನ್ತುಷ್ಟೋ ವಿಷ್ಣುಚಿತ್ತಕ:**
**ಗೋದಾಂ ವಿಲೋಕ್ಯಾರ್ದ್ರದೃಶಾ ವ್ಯಾಜಹಾರ ಶುಭಂ ವಚ: ॥೨೯॥**

ಆ ವಚನವನ್ನು ಕೇಳಿ ಸಂತುಷ್ಟರಾದ ವಿಷ್ಣುಚಿತ್ತರು ಗೋದೆಯನ್ನು ಬಾಷ್ಪಪೂರಿತ ನೇತ್ರಗಳಿಂದ ನೋಡುತ್ತ ಒಂದು ಶುಭವಾದ ವಾಕ್ಯವನ್ನು ಹೇಳಿದರು.

**ಅಷ್ಟೋತ್ತರಶತಂ ಧಾಮ್ನಾಮಸ್ತ್ಯರ್ಚಾರೂಪಿಣೋ ಹರೇ:**
**ಭುವಿ ಯದ್ವೈಭವಂ ಶ್ರುತ್ವಾ ಪುಂಸಾಂ ಮುಕ್ತಿ: ಕರೇ ಸ್ಥಿತಾ॥೩೦॥**

ಅರ್ಚಾರೂಪಿಯಾದ ಹರಿಯು ಭೂಲೋಕದಲ್ಲಿ ಅಷ್ಟೋತ್ತರ ಶತ ದಿವ್ಯಕ್ಷೇತ್ರಗಳಲ್ಲಿ ವಾಸಿಸುತ್ತಿರುವನು. ಅವನ ವೈಭವವನ್ನು ಕೇಳಿದರೆ ಮನುಷ್ಯರಿಗೆ ಮುಕ್ತಿಯು ಕರಸ್ಥಿತವಾಗುವುದು.

**ವಿಷ್ಣುನಾಮಪದಾನ್ಯೇವಂ ವಿಷ್ಣುಚಿತ್ತೇ ವಿವೃಣ್ವತಿ**
**ಮಧುರಾಧೀಶಕೃಷ್ಣಸ್ಯ ವೃತ್ತಂ ಶ್ರುತ್ವಾತಿಹರ್ಷಿತಾ ॥೩೧॥**

ಹೀಗೆ ವಿಷ್ಣುಚಿತ್ತರು ವಿಷ್ಣುವಿನ ಮಹಿಮೆ ಮತ್ತು ದಿವ್ಯಕ್ಷೇತ್ರಗಳ ಬಗ್ಗೆ ವಿವರಿಸುತ್ತಿರುವಾಗ ಮಧುರಾಧೀಶನಾದ ಕೃಷ್ಣನ ವೃತ್ತವನ್ನು ಕೇಳಿ ಗೋದೆಯು ಅತಿಹರ್ಷಿತಳಾದಳು.

**ತತಸ್ಸುನ್ದರರಾಜಸ್ಯ ಚರಿತಂ ಶೃಣ್ವತೀ ಮುದಾ**
**ಉದಾರಪುಲಕಾಂಕೂರಮುವಾಹ ಸುತನುಸ್ತನೌ ॥೩೨॥**

ಮೇಲೆ ನಾಗಪಟ್ಟಿನದ ಸುಂದರರಾಜನ ಚರಿತೆಯನ್ನು ಪ್ರೀತಿಯಿಂದ ಕೇಳಿ ಅವಳ ತನುವೆಲ್ಲಾ ರೋಮಾಂಚವಾಯಿತು.

**ವೇಂಕಟಾದ್ರಿಪತೇರ್ವಿಷ್ಣೋಃ ಕಥಾಕರ್ಣನಕರ್ಮಣಾ**
**ರಮಣೀಯೇಮುಖೇ ತಸ್ಯಾಃ ವಿಕಾಸೋಽಭೂದ್ವಿಜೃಂಭಿತಃ॥೩೩॥**

ವೇಂಕಟಾದ್ರಿಪತಿಯ ಕಥೆಯನ್ನು ಕೇಳಿದ ಮೇಲೆ ಅವಳ ರಮಣೀಯ ಮುಖವು ಮತ್ತಷ್ಟು ವಿಜೃಂಭಣೆಯಿಂದ ವಿಕಾಸವಾಯಿತು.

**ಶ್ರೀಮತೋ ರಙ್ಗರಾಜಸ್ಯ ಶೃಣ್ವತೀ ಮಹಿಮೋದಯಂ**
**ಆಧತ್ತಾಮನ್ದಮಾನನ್ದಮರವಿನ್ದದಲೇಕ್ಷಣಾ ॥೩೪॥**

ಶ್ರೀಮಂತನಾದ ರಂಗನಾಥನ ಮಹಿಮೆಯನ್ನು ಕೇಳಿದ ಮೇಲಂತೂ ಅರವಿಂದದಳೇಕ್ಷಣೆಯಾದ ಗೋದೆಯು ಅಮಂದಾನಂದವನ್ನು ಹೊಂದಿದಳು.

**ಏವಂ ನಿಶಮ್ಯ ಸರ್ವೇಷಾಂ ಹರೀಣಾಂ ವೈಭವಂ ತದಾ**
**ಭಟ್ಟನಾಥಮುಖಾತ್ಸರ್ವಂ ಗೋದಾನನ್ದಮವಾಪ ಸಾ ॥೩೫॥**

ಹೀಗೆಯೇ ಎಲ್ಲಾ ಹರಿಗಳ ವೈಭವವನ್ನು ಭಟ್ಟನಾಥರ ಮುಖದಿಂದ ಕೇಳಿ ಗೋದೆಯು ಮಹದಾನಂದತುಂದಿಲಳಾದಳು.

**ಅಷ್ಟೋತ್ತರಶತಸ್ಥಾನಸ್ಥಿತಾರ್ಚಾರೂಪಿಣಸ್ತದಾ**
**ತಾ ವಿಷ್ಣುಮೂರ್ತಯಸ್ಸರ್ವಾ ಭಟ್ಟನಾಥೇನ ಸಂಸ್ತುತಾಃ ॥೩೬॥**

ಅಷ್ಟೋತ್ತರಶತ ದಿವ್ಯಕ್ಷೇತ್ರಗಳಲ್ಲಿಯೂ ವಿರಾಜಮಾನರಾದ ವಿಷ್ಣುಮೂರ್ತಿಗಳನ್ನು ಭಟ್ಟನಾಥರು ಸ್ತುತಿಸಿದರು.

**ಗೋದಾ ಸ್ವಯಂವರೇ ಶೀಘ್ರಂ ಗೋದೋದ್ವಾಹಾಭಿಕಾಂಕ್ಷಿಣಃ**
**ಸ್ವಕೀಯದಿವ್ಯಲಾವಣ್ಯಯೌವನಾದ್ಯಭಿಸಂಯುತಾಃ ||೩೭||**

**ಶ್ರೀರಙ್ಗೇಶಾದಯೋ ದೇವಾ ಧನ್ವಿಮಙ್ಗಲಮಾಗತಾಃ**
**ರಙ್ಗೇಶಾದೀಂಸ್ತತಸ್ಸರ್ವಾನ್ ಗೋದಾದೇವೀ ವಿಲೋಕ್ಯ ತಾನ್ ।೩೮।**

ಶ್ರೀರಂಗೇಶಾದಿಯಾಗಿ ಆ ೧೦೮ ದೇವರುಗಳೆಲ್ಲರೂ ತಂತಮ್ಮ ದಿವ್ಯಲಾವಣ್ಯ ಯೌವನಾದಿಗಳಿಂದ ಕೂಡಿದವರಾಗಿ ತ್ವರೆಯಿಂದ ಗೋದಾ ಸ್ವಯಂವರದಲ್ಲಿ ಗೋದೆಯ ಪಾಣಿಗ್ರಹಣೋತ್ಸುಕರಾಗಿ ಎಲ್ಲರೂ ಶ್ರೀವಿಲ್ಲಿಪುತ್ತೂರಿಗೆ ಬಂದು ಸೇರಿದರು.

**ತನ್ಮಧ್ಯೇ ಸುಮಹಾತ್ಮಾನಂ ತಂ ವಿಲೋಕ್ಯ ಮಹೌಜಸಮ್**
**ರಙ್ಗೇಶಂ ಸುನ್ದರವರಂ ವರಯಾಮಾಸ ಸುನ್ದರೀ ||೩೯||**

ರಂಗೇಶಾದಿಯಾಗಿ ಸಮಾಸೀನರಾಗಿರುವ ಆ ದೇವರುಗಳೆಲ್ಲರನ್ನೂ ಅವಲೋಕಿಸಿ ಸುಂದರಿಯಾದ ಗೋದೆಯು ಸುಮಹಾತ್ಮನೂ ಪ್ರಭಾವಶಾಲಿಯೂ ಸುಂದರನೂ ಆದ ರಂಗೇಶನನ್ನೇ ಮನಸಾರೆ ವರಿಸಿದಳು.

**ಭಟ್ಟನಾಥೇನ ಹರಯಃ ತೇನ ಸಂಪೂಜಿತಾಸ್ತತಃ**
**ಸಂಪ್ರೇಷಿತಾಶ್ಚ ತೇ ಸರ್ವೇ ಸ್ವಂ ಸ್ವಂ ಸ್ಥಾನಂ ಪ್ರಪೇದಿರೇ||೪೦||**

ಆಮೇಲೆ ಭಟ್ಟನಾಥರಿಂದ ಆ ಹರಿಗಳೆಲ್ಲರೂ ಚೆನ್ನಾಗಿ ಪೂಜಿಸಲ್ಪಟ್ಟು ಮತ್ತೆ ಬೀಳ್ಕೊಡಲ್ಪಟ್ಟು ತಂತಮ್ಮ ದಿವ್ಯಸ್ಥಾನಗಳನ್ನು ಸೇರಿಕೊಂಡರು.

**ಸ್ವಲಾವಣ್ಯಾದಿಮಹಿಮಾಸಮ್ಪದ್ಭಿಸ್ಸಾದರಂ ಮುಹುಃ**
**ಗೋದಾಂ ಸಮ್ಮೋಹಯಿತ್ವಾಶು ರಙ್ಗೇಶೋ ರಙ್ಗಮಭ್ಯಗಾತ್ ||೪೧||**

ರಂಗೇಶನೂ ತನ್ನ ಲಾವಣ್ಯಮಹಿಮಾಸಂಪತ್ತಿನಿಂದ ಸಾದರವಾಗಿ ಅಡಿಗಡಿಗೆ ಗೋದೆಯನ್ನು ಸಮ್ಮೋಹನಕ್ಕೆ ಒಳಪಡಿಸಿ ಶ್ರೀರಂಗಕ್ಕೆ ಹೋಗಿ ಸೇರಿದನು.

**ಗೋದಾ ರಙ್ಗೇಶ್ವರಂ ದೇವಂ ಮತ್ವಾ ಸ್ವಾಭಿಮತಂ ವರಮ್**
**ಧ್ಯಾಯನ್ತೀ ಸತತಂ ತಸ್ಥೌ ತಮೇವಾನನ್ಯಮಾನಸಾ ||೪೨||**

ಗೋದೆಯೂ ರಂಗೇಶ್ವರನನ್ನೇ ತನಗೆ ಅಭಿಮತನಾದ ವರನೆಂದು ವರಿಸಿ, ಅವನನ್ನೇ ಅನನ್ಯಮನಸ್ಕಳಾಗಿ ಸತತವೂ ಧ್ಯಾನಿಸುವವಳಾಗಿ ನಿಂತಳು.

**ರಙ್ಗೇಶಾಗಮನಾಭಾವಾತ್ಸಾ ಗೋದಾ ವಿರಹಾತುರಾ**
**ಗೋಪಿಕಾ ಕೃಷ್ಣವಿರಹಾದ್ಯಥಾತಪ್ಯನ್ತ ಭೂರಿಶಃ ॥೪೩॥**
**ರಙ್ಗೇಶಲಗ್ನಹೃದಯಾ ಹ್ಯತಪ್ಯತ ದಿವಾನಿಶಮ್**
**ಜಿತನಿದ್ರಾ ಜಿತಾಹಾರಾ ರಾಧಿಕೇವ ಸಮಾಸ್ಥಿತಾ ॥೪೪॥**

ರಂಗೇಶಾಗಮನವನ್ನೇ ಎದುರು ನೋಡುತ್ತ ಅವನ ಬರದಿರುವಿಕೆಯಿಂದ ಗೋದೆಯು ವಿರಹಾತುರಳಾದಳು. ಗೋಪಿಕೆಯರು ಕೃಷ್ಣವಿರಹದಿಂದ ಹೇಗೆ ಅತೀವ ಪರಿತಪಿಸಿದರೋ ಹಾಗೆಯೇ ಗೋದೆಯೂ ರಂಗೇಶನಲ್ಲಿ ನೆಟ್ಟಹೃದಯದವಳಾಗಿ ಅಹೋರಾತ್ರಿ ಪರಿತಪಿಸಿದಳು. ನಿದ್ರಾಹಾರಗಳನ್ನು ತ್ಯಜಿಸಿ ರಾಧಿಕೆಯನ್ನು ಅನುಕರಿಸ ತೊಡಗಿದಳು.

**ಪಿತಾ ದುಹಿತರಂ ವೀಕ್ಷ್ಯ ವಿಷ್ಣುಚಿತ್ತೋಽಪ್ಯತಪ್ಯತ**
**ರಙ್ಗೇಶೋ ಭಗವಾನ್ದೇವೋ ಗೋದಾಯಾಸ್ಸದೃಶಃ ಪತಿಃ॥೪೫॥**

ಹೀಗಿರುವ ಮಗಳನ್ನು ನೋಡಿ ತಂದೆಯಾದ ವಿಷ್ಣುಚಿತ್ತರೂ ಪರಿತಪಿಸಿದರು. ರಂಗೇಶನಾದ ಭಗವಂತನು ಗೋದೆಗೆ ಸದೃಶನಾದ ಪತಿಯು.

**ಕಥಂ ಮಹದಿದಂ ಕಾರ್ಯಂ ತಸ್ಯಾಸ್ತದ್ ಘಟತೇಽಧುನಾ**
**ಬ್ರಹ್ಮೇಶಸನಕಾದೀನಾಂ ಯೋಗಿನಾಮಪ್ಯಗೋಚರಃ ॥೪೬॥**

ಅವಳ ಮಹತ್ತಾದ ಅಭಿಲಾಷೆಯು ಈಗ ಹೇಗೆ ನೆರವೇರುವುದೋ? ಬ್ರಹ್ಮೇಶ ಸನಕಾದಿಗಳಿಗೆ ಯೋಗಿಗಳಿಗೆ ಅಗೋಚರನು.

**ವೇದಾನ್ತವೇದ್ಯೋ ಭಗವಾನಯಂ ನಾರಾಯಣಃ ಪರಃ**
**ಅನನ್ತಕೋಟಿಬ್ರಹ್ಮಾಣ್ಡನಾಯಕಶ್ಚ ಶ್ರಿಯಃಪತಿಃ ॥೪೭॥**

ವೇದಾಂತವೇದ್ಯನಾದ ಭಗವಂತನು ಆ ಪರಮಾತ್ಮನಾದ ನಾರಾಯಣನು. ಅವನೋ ಅನಂತಕೋಟಿ ಬ್ರಹ್ಮಾಂಡನಾಯಕನಾದ ಶ್ರಿಯಃಪತಿಯು.

**ಕ್ಷುದ್ರೋ ದರಿದ್ರೋ ದುರ್ಮಾನೀ ತ್ವಹಂ ತ್ವಾರಾಮಕಾರಕಃ**
**ಕ್ವಾಸಾವತ್ಯನ್ತಪಾಪಿಷ್ಠಃ ಕ್ವಚ ಶ್ರೀರಙ್ಗನಾಯಕಃ ॥೪೮॥**

ಆದರೆ ನಾನೋ ಒಬ್ಬ ಕ್ಷುದ್ರ ದರಿದ್ರ ದುರ್ಮಾನಿಯಾದ ಒಂದು ಚಿಕ್ಕ ತೋಟಗಾರನು. ಅತ್ಯಂತ ಪಾಪಿಷ್ಠನಾದ ನಾನೆಲ್ಲಿ, ಶ್ರೀರಂಗನಾಯಕನಾದ ಅವನೆಲ್ಲಿ?

**ವರಂ ಸಮೀಚೀನತರಮಕಾಮಯತ ಮೇ ಸುತಾ**
**ತಯೋರ್ವೈವಾಹಿಕಂ ಕಾರ್ಯಂ ಶ್ರೀರಙ್ಗೇಶ್ವರಗೋದಯೋಃ ॥೪೯॥**

ನನ್ನ ಪುತ್ರಿಯು ಸಮೀಚೀನತರನಾದ ವರನನ್ನೇ ಕಾಮಿಸಿದಳು. ಆದರೆ ಅವನು ಕಷ್ಟಸಾಧ್ಯನು. ಗೋದಾರಂಗೇಶ್ವರರ ವೈವಾಹಿಕವನ್ನು ಮಾಡಲೇಬೇಕು,

**ಕೇನೋಪಾಯೇನ ತತ್ಸಾಧ್ಯಮಿತಿಚಿನ್ತಾಪರೋಽಭವತ್**
**ಪ್ರವ್ಯಾಕುಲಾನ್ತಃಕರಣೋ ಭಟ್ಟನಾಥಸ್ತದಾನಘಃ ॥೫೦॥**

ಆದರೆ ಅದನ್ನು ಹೇಗೆ ನೆರವೇರಿಸುವುದೋ ಹೇಗೆ ಸಾಧಿಸುವುದೋ ಎಂದು ಭಟ್ಟನಾಥರು ಚಿಂತಾಪರರಾದರು. ಅನಘರಾದ ಭಟ್ಟನಾಥರು ಮಹಾವ್ಯಾಕುಲ ಚಿತ್ತರಾದರು.

**ತಮೇವ ಶರಣಂ ಗತ್ವಾ ಸುಷ್ವಾಪಾಕೃತಭೋಜನಃ**
**ಸ್ವಪ್ನೇ ಪ್ರಸನ್ನೋ ಭಗವಾನ್ ಭಟ್ಟನಾಥಸ್ಯ ರಙ್ಗರಾಟ್ ॥೫೧॥**

ಆ ರಾತ್ರಿ ಭೋಜನವನ್ನು ಉಣ್ಣದೇ, ರಂಗನಾಥನನ್ನೇ ಶರಣುಹೋಗಿ ಶಯನಿಸಿ ಬಿಟ್ಟರು. ಸ್ವಪ್ನದಲ್ಲಿ ಪ್ರಸನ್ನನಾದ ಭಗವಾನ್ ರಂಗನಾಥನು ಭಟ್ಟನಾಥರಿಗೆ ಹೇಳಿದನು.

**ಸ ತ್ವಂ ಶ್ವಶುರ ಸರ್ವಜ್ಞ ! ಕಿಮರ್ಥಂ ಪರಿತಪ್ಯಸೇ**
**ತೂರ್ಣಂ ದುಹಿತರಂ ಗೋದಾಂ ಸಮಾದಾಯಾರ್ಯ ಸಾಂಪ್ರತಮ್॥೫೨॥**
**ಮಮ ರಙ್ಗಂ ಸಮಾಯಾಹಿ ಮಹತಾ ವೈಭವೇನ ಚ**
**ಸರ್ವೇಷಾಂ ಪಶ್ಯತಾಂ ಶೀಘ್ರಂ ಗೋದಾಯಾ ದುಹಿತುಸ್ತವ ॥೫೩॥**
**ಕರಿಷ್ಯಾಮ್ಯಹಮೇವಾದ್ಯ ಪಾಣಿಗ್ರಹಣಮಙ್ಗಳಮ್**

ಸರ್ವಜ್ಞನಾದ ಹೇ ನನ್ನ ಶ್ವಶುರನೇ, ಯಾವುದಕ್ಕಾಗಿ ಪರಿತಪಿಸುತ್ತಿರುವೆ. ನೀನೀಗಲೇ ತ್ವರೆಯಿಂದ ನಿನ್ನ ಪುತ್ರಿಯಾದ ಗೋದೆಯನ್ನು ಕರೆದುಕೊಂಡು ಮಹಾ ವೈಭವದೊಂದಿಗೆ ಮೆರವಣಿಗೆ ಮಾಡಿಕೊಂಡು ಶ್ರೀರಂಗಕ್ಕೆ ಬಂದುಬಿಡು. ಎಲ್ಲರೂ ನೋಡುತ್ತಿರುವ ಹಾಗೆಯೇ ನಾನು ಶೀಘ್ರವಾಗಿ ನಿನ್ನ ಪುತ್ರಿಯ ಪಾಣಿಗ್ರಹಣ ಮಂಗಳವನ್ನು ನಡೆಸಿಬಿಡುತ್ತೇನೆ, ಎಂದು.

**ತತಸ್ಸ್ವಪ್ನಾತ್ಸಮುತ್ಥಾಯ ಭಟ್ಟನಾಥಸ್ಸವಿಸ್ಮಯಃ ॥೫೪॥**
**ದುಹಿತ್ರೇ ಸ್ವಪ್ನವೃತ್ತಾನ್ತಂ ಸರ್ವಂ ಸಮ್ಯಙ್ನಿವೇದ್ಯ ತಮ್**
**ಸನ್ತುಷ್ಟೋ ನಿರ್ಭರಸ್ತಸ್ಥೌ ತಾಂ ಸುತಾಂ ಲಾಲಯಂಸ್ತದಾ ॥೫೫॥**

ಆಗ ಸ್ವಪ್ನವನ್ನು ಬಿಟ್ಟೆದ್ದ ಸವಿಸ್ಮಯನಾದ ಭಟ್ಟನಾಥನು ತನ್ನ ಪುತ್ರಿಗೆ ಆ ಸ್ವಪ್ನವೃತ್ತಾಂತವನ್ನು ಆಮೂಲಾಗ್ರವಾಗಿ ಅರುಹಿ ಸಂತುಷ್ಟನಾಗಿ ನಿರ್ಭರನಾಗಿ ಗೋದೆಯನ್ನು ಉಪಲಾಲಿಸುತ್ತ ಇದ್ದನು.

**ಅತಿಪ್ರಿಯತಮಂ ಸತ್ಯಂ ತನ್ನಿಶಮ್ಯ ಪಿತುರ್ವಚಃ**
**ಅಕರೋದ್ ಭಗವತ್ಪ್ರೀತ್ಯೈ ಧನುರ್ಮಾಸವ್ರತೋತ್ತಮಮ್ ॥೫೬॥**

ಅತಿಪ್ರಿಯವೂ ಸತ್ಯವೂ ಆದ ತಂದೆಯ ವಚನವನ್ನು ಕೇಳಿ ಅವಳು ಭಗವತ್ಪ್ರೀತಿಗಾಗಿ ಉತ್ತಮವಾದ ಧನುರ್ಮಾಸದ ವ್ರತವನ್ನು ಆರಂಭಿಸಿದಳು. ಲೋಕ ರಕ್ಷಣಾರ್ಥವಾಗಿ ನಿಯತವ್ರತಳಾಗಿ ಗೋದೆಯು ವ್ರತದಲ್ಲಿ ತೊಡಗಿದಳು.

**ಸಾ ಲೋಕರಕ್ಷಣಾರ್ಥಾಯ ಗೋದಾದೇವೀ ಯತವ್ರತಾ**
**ಹೇಮನ್ತೇ ಪ್ರಥಮೇ ಮಾಸಿ ನನ್ದವ್ರಜಕುಮಾರಿಕಾಃ ॥೫೭॥**
**ಚೇರುರ್ಹವಿಷ್ಯಂ ಭುಞ್ಜಾನಾಃ ಕಾತ್ಯಾಯನ್ಯರ್ಚನವ್ರತಮ್**
**ಇತಿ ಚೈವಂ ಯಥಾ ಚಕ್ರುಃ ಪ್ರಪನ್ನಾ ಗೋಪಿಕಾಸ್ತ್ರಿಯಃ ॥೫೮॥**
**ಧನುರ್ಮಾಸವ್ರತಂ ಗೋದಾ ತಥೈವ ಭಗವತ್ಪರಾ**

ಹೇಮಂತ ಋತುವಿನ ಮಾರ್ಗಶಿರಮಾಸದಲ್ಲಿ ಪ್ರಪನ್ನರಾದ ಗೋಪಸ್ತ್ರೀಯರಾದ ನಂದವ್ರಜಕುಮಾರಿಯರು ಹವಿಷ್ಯವಾದ ಯಜ್ಞಪ್ರಸಾದವನ್ನು ಭುಜಿಸುತ್ತಾ ಕಾತ್ಯಾಯನ್ಯರ್ಚನವೆಂಬ ವ್ರತವನ್ನು ಚರಿಸಿದಂತೆ ಗೋದೆಯು ಭಗವಂತನನ್ನು ಉದ್ದೇಶಿಸಿ ಧನುರ್ಮಾಸ ವ್ರತದಲ್ಲಿ ತೊಡಗಿದಳು.

**ಸ್ವವೇಶ್ಮನಿ ಪ್ರತಿಷ್ಠಾಪ್ಯ ತಂ ಸುನ್ದರವರಂ ಹರಿಮ್ ॥೫೯॥**
**ರಙ್ಗೇಶಂ ಪೂಜಯಾಮಾಸ ವಿಧಿನಾ ನಿಯತವ್ರತಾ**

ಸುಂದರವರನಾದ ಅಳಗಿಯ ಮಣವಾಳನಾದ ರಂಗೇಶನನ್ನು ಮನೆಯಲ್ಲಿ ಪ್ರತಿಷ್ಠಾಪಿಸಿ ಅವನನ್ನು ವಿಧಿನಿಯಮಗಳೊಂದಿಗೆ ಪೂಜಿಸಿಕೊಂಡಿದ್ದಳು.

**ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ರಙ್ಗರಙ್ಗೇತಿ ಭಾಷಿಣೀ॥೬೦॥**

ಸ್ನಾತ್ವಾ ಶುಕ್ಲಾಮ್ಬರಧರಾ ಹ್ಯೂರ್ಧ್ವಪುಣ್ಡ್ರಧರಾ ಶುಭಾ
ಪೀತಾಂಬರೇಣ ರಙ್ಗೇಶಂ ಸಮಲಂಕೃತ್ಯ ಭೂಷಣೈಃ ॥೬೧॥
ಗಂಧೈಃ ಪುಷ್ಪೈಶ್ಚ ಧೂಪೈಶ್ಚ ದೀಪೈರ್ನೀರಾಜನೈಸ್ತಥಾ
ಸಮ್ಯಕ್ಸಂಪೂಜ್ಯ ವಿಧಿವದ್ ಗೋದಾ ಹರಿಪರಾಯಣಾ ॥೬೨॥

ಬ್ರಾಹ್ಮೀಮುಹೂರ್ತದಲ್ಲಿಯೇ ಶಯನ ಬಿಟ್ಟೆದ್ದು ರಂಗರಂಗ ಎಂದು ಉಚ್ಚರಿಸುತ್ತ ಸುಪ್ರಭಾತ ಮಾಡಿದಳು. ಸ್ನಾನಮಾಡಿ ಶುಕ್ಲಾಂಬರವನ್ನು ಧರಿಸಿ ಊರ್ಧ್ವಪುಂಡ್ರವನ್ನು ಧರಿಸಿಕೊಂಡು ಶುಭವಾಗಿ ರಂಗೇಶನನ್ನು ಪೀತಾಂಬರದಿಂದಲೂ ಭೂಷಣಗಳಿಂದಲೂ ಅಲಂಕರಿಸಿ ಗಂಧಪುಷ್ಪ ಧೂಪದೀಪ ನೀರಾಜನಗಳಿಂದ ಗೋದೆಯು ವಿಧಿಯಂತೆ ಸಂಪೂಜಿಸಿದಳು.

ಮುದ್ಗಾನ್ನಂ ಶರ್ಕರಾಜ್ಯಾದಿ ಸಂಪ್ಲುತಂ ಫಲಸಂಯುತಮ್
ನೈವೇದ್ಯಂ ವಿಷ್ಣವೇ ಸಮ್ಯಕ್ಸಮರ್ಪ್ಯಾತ್ಯನ್ತಭಕ್ತಿತಃ ॥೬೩॥
ದತ್ವಾ ಕರ್ಪೂರತಾಮ್ಬೂಲಂ ನೀರಾಜನಮನುತ್ತಮಮ್
ಗಾಥಾಂ ಮನೋಹರಾಮೇಕಾಂ ಕೃತ್ವಾ ದ್ರಾವಿಡಭಾಷಯಾ॥೬೪॥
ತಾಂ ಸಮರ್ಪ್ಯ ಚ ಪೂಜಾನ್ತೇ ಪುನರ್ನೀರಾಜನಂ ದದೌ

ಹರಿಪರಾಯಣೆಯಾಗಿ ಹೆಸರುಬೇಳೆಯಿಂದ ಕೂಡಿದ ಅನ್ನವನ್ನು ಬೇಯಿಸಿ ಸಕ್ಕರೆ ತುಪ್ಪಗಳಿಂದ ತುಂಬಿಸಿ ವಿಷ್ಣುವಿಗೆ ಅತ್ಯಂತ ಭಕ್ತಿಯೊಡನೆ ನೈವೇದ್ಯ ಮಾಡಿ ಫಲಗಳನ್ನು ನಿವೇದಿಸಿ ಕರ್ಪೂರತಾಂಬೂಲಾದಿಗಳನ್ನೂ ಸಮರ್ಪಿಸಿ ಉತ್ತಮವಾದ ನೀರಾಜನವನ್ನು ಮಾಡಿ ಮನೋಹರವಾದ ಒಂದು ದ್ರಾವಿಡ ಪಾಶುರವನ್ನು ರಚಿಸಿ ದೇವರಿಗೆ ಒಪ್ಪಿಸಿ ಪುನಃ ಪೂಜಾಂತ್ಯದಲ್ಲಿ ನೀರಾಜನವನ್ನು ಅರ್ಪಿಸಿದಳು.

ತತಃ ಪ್ರದಕ್ಷಿಣಂ ಕೃತ್ವಾ ರಙ್ಗೇಶಂ ಪ್ರಣಿಪತ್ಯ ತಮ್ ॥೬೫॥
ಕೃತಾಞ್ಜಲಿಪುಟಾ ಭಕ್ತ್ಯಾ ಪ್ರಾರ್ಥಯಾಮಾಸ ನಿಶ್ಚಲಾ
ರಂಗೇಶ ಕರುಣಾಸಿನ್ಧೋ ಮತ್ಪಾಣಿಗ್ರಹಣಂ ಕುರು ॥೬೬॥

ಅನಂತರ ಪ್ರದಕ್ಷಿಣೆಯನ್ನು ಮಾಡಿ ರಂಗೇಶನಿಗೆ ಪ್ರಣಾಮವನ್ನು ಮಾಡಿದಳು. ಕೈಜೋಡಿಸಿಕೊಂಡು ನಿಶ್ಚಲವಾಗಿ ಭಕ್ತಿಯಿಂದ ಪ್ರಾರ್ಥಿಸಿದಳು. ರಂಗೇಶ! ಕರುಣಾಸಿಂಧೋ! ನನ್ನ ಪಾಣಿಗ್ರಹಣವನ್ನು ಮಾಡಿಕೋ.

**ತ್ವಾಂ ವಿನಾನ್ಯಂ ನ ಜಾನಾಮಿ ಸತ್ಯಂ ವಚ್ಮಿ ನಮೋಽಸ್ತು ತೇ**
**ಏವಂ ಸಮ್ಪ್ರಾರ್ಥ್ಯ ಸಾ ನಿತ್ಯಂ ಸ್ವಮನೋಭೀಷ್ಟಮುತ್ತಮಮ್ ||೬೭||**
**ತದೀಯಾರಾಧನಂ ಚಕ್ರೇ ಭಗವತ್ಪ್ರೀತಯೇಽನಿಶಮ್**

ನಿನ್ನನ್ನು ಬಿಟ್ಟು ಬೇರೆ ಯಾರನ್ನೂ ನಾನು ಅರಿಯೆನು. ನಾನು ಸತ್ಯವನ್ನೇ ಹೇಳುತ್ತೇನೆ. ನಿನಗೆ ನಮಸ್ಕಾರ. ಹೀಗೆಂದು ನಿತ್ಯ ಪ್ರಾರ್ಥನೆ ಮಾಡಿ ತನ್ನ ಮನೋಭೀಷ್ಟವನ್ನು ದೇವರಿಗೆ ನಿವೇದಿಸಿಕೊಂಡು ಭಗವತ್ಪ್ರೀತಿಗಾಗಿ ನಿರಂತರವಾಗಿ ತದೀಯಾರಾಧನೆಯನ್ನು ಮಾಡುತ್ತಿದ್ದಳು.

**ಭುಕ್ತ್ವೈಕವಾರಂ ನೈವೇದ್ಯಂ ಹವಿಷ್ಯಂ ನಿಯತವ್ರತಾ ||೬೮||**
**ದೃಢಭಕ್ತಿಯುತಾ ಗೋದಾ ಭೂಶಯಾ ಬ್ರಹ್ಮಚಾರಿಣೀ**
**ರಂಗೇಶಲಗ್ನಹೃದಯಾ ರಾಧಿಕೇವ ಸಮಾಸ್ಥಿತಾ ||೬೯||**

ನಿಯತವ್ರತಳಾಗಿ ಒಂದೇವೇಳೆ ನಿವೇದಿತವಾದ ಹವಿಷ್ಯಾನ್ನವನ್ನು ಭೋಜನ ಮಾಡಿ, ದೃಢಭಕ್ತಿಯುತಳಾಗಿ ಗೋದೆಯು ಬರಿಯ ಭೂಮಿಯ ಮೇಲೆ ಮಲಗಿಕೊಂಡು, ಬ್ರಹ್ಮಚಾರಿಣಿಯಾಗಿ ರಂಗೇಶನಲ್ಲೇ ನೆಟ್ಟ ಹೃದಯದವಳಾಗಿ ರಾಧಿಕೆಯಂತೆ ನಡೆದುಕೊಳ್ಳುತ್ತಿದ್ದಳು.

**ಮಾಸಮೇಕಂ ಚರಿತ್ವೈವಮೇತದ್ವ್ರತಮನುತ್ತಮಂ**
**ಸಾ ಸಮ್ಯಗನುಭೂಯಾರ್ಥಂ ಶ್ರೀಮದ್‌ಭಾಗವತಸ್ಥಿತಮ್ ||೭೦||**
**ಪ್ರಬನ್ಧದ್ವಿತಯಂ ಚಕ್ರೇ ಸರ್ವಲೋಕಾಮೃತಪ್ರದಮ್**

ಹೀಗೆಯೇ ಒಂದು ಮಾಸ ಪೂರ್ತಿ ಅನುತ್ತಮವಾದ ದಿನಚರ್ಯೆಯನ್ನು ನಡೆಸಿದಳು. ಅವಳು ಶ್ರೀಮದ್ಭಾಗವತವನ್ನು ಸಾರ್ಥವಾಗಿ ಅಧ್ಯಯನ ಮಾಡಿ ಸರ್ವಲೋಕಕ್ಕೂ ಅಮೃತವನ್ನು ಈಯುವ ಎರಡು ಪ್ರಬಂಧಗಳನ್ನು ರಚಿಸಿದಳು.

**ದಿವ್ಯಪ್ರಬನ್ಧಸ್ತತ್ರೈಕೋ ಲಕ್ಷ್ಮೀವ್ರತಾಭಿಧೋ ಮಹಾನ್ ||೭೧||**
**ಧನುರ್ಮಾಸೋತ್ಸವಪರಃ ತ್ರಿಂಶದ್ ಗಾಥಾವಿರಾಜಿತಃ**

ಅದರಲ್ಲಿ ಒಂದಾದ ಲಕ್ಷ್ಮೀವ್ರತವೆಂಬ ತಿರುಪ್ಪಾವೈಯು ಧನುರ್ಮಾಸ ವ್ರತೋತ್ಸವದ ಪರವಾಗಿ ಮುವ್ವತ್ತು ಹಾಡುಗಳನ್ನೊಳಗೊಂಡು ವಿರಾಜಿಸುತ್ತದೆ.

**ಗೋದಾಸ್ತವಾಭಿಧಸ್ತತ್ರ ದ್ವಿತೀಯ: ಪರಿಕೀರ್ತಿತ: ॥೭೨॥**
**ತ್ರಿಚತ್ವಾರಿಂಶದಧಿಕಂ ಗಾಥಾನಾಂ ಶತಮತ್ರ ಹಿ**
**ಸಂಸ್ತುತಾನಿ ತಯಾಷ್ಟೌ ಚ ವಿಷ್ಣುಸ್ಥಾನಾನಿ ಭೂತಲೇ ॥೭೩॥**

ಮತ್ತೊಂದಾದ ಎರಡನೆಯದು ಗೋದಾಸ್ತವ ಅಥವಾ ನಾಚ್ಚಿಯಾರ್ ತಿರುಮೊಳಿ ಎಂಬ ಹೆಸರುಳ್ಳ ಒಂದು ನೂರಾನಲವತ್ತಮೂರು ಹಾಡುಗಳನ್ನುಳ್ಳ ಪ್ರಬಂಧವಾಗಿ ವಿರಾಜಿಸುತ್ತದೆ. ಇದರಲ್ಲಿ ಗೋದೆಯಿಂದ ವಿಷ್ಣುವಿನ ಎಂಟು ದಿವ್ಯಸ್ಥಾನಗಳು ಕೀರ್ತಿಸಲ್ಪಟ್ಟಿವೆ.

**ರಙ್ಗಂ ಕೃಷ್ಣಪುರಂ ಚ ಧನ್ವಿನಗರಂ ಪಾಣ್ಡ್ಯೇ ವನಾದ್ರಿರ್ಮಹಾನ್**
**ಕ್ಷೀರಾಬ್ಧಿರ್ವೃಷಭೂಧರಶ್ಚ ಮಧುರಾ ನನ್ದವ್ರಜಶ್ಚೋತ್ತರೇ**
**ಅಷ್ಟೌ ತೇ ಸಮಭಿಷ್ಟುತಾ ಭಗವತ: ಶ್ರೀಗೋದಯಾ ಭಕ್ತಿತ:**
**ತಾನೇವಂ ಪ್ರತಿವಾಸರಂ ಪಠತಿ ಯ: ಶ್ರೀಮಾನ್ಸಭೂಯಾನ್ನರ:॥೭೪॥**

ಶ್ರೀರಂಗ, ತಿರುಕ್ಕಣ್ಣಪುರ, ಶ್ರೀವಿಲ್ಲಿಪುತ್ತೂರು, ಪಾಂಡ್ಯದ ತಿರುಮಾಲಿರುಂಜೋಲೈ, ಕ್ಷೀರಾಬ್ಧಿ, ತಿರುಮಲೈ ಹಾಗೂ ಮಧುರೆ ಮತ್ತು ಉತ್ತರದ ಗೋಕುಲವೆಂಬ ಎಂಟು ವಿಷ್ಣುವಿನ ದಿವ್ಯಕ್ಷೇತ್ರಗಳು ಗೋದೆಯಿಂದ ಭಕ್ತಿಯೊಂದಿಗೆ ಅಭಿಷ್ಟುತವಾಗಿವೆ. ಯಾವನು ಅವುಗಳನ್ನು ಪ್ರತಿದಿನವೂ ಪಠಿಸುವನೋ ಅವನು ಶ್ರೀಮಂತನಾಗುವನು.

**ತ್ರಿಂಶದ್ ಗಾಥಾಯುತಂ ದಿವ್ಯಂ ಪ್ರಬಂಧಂ ವಿದಧೇ ತದಾ**
**ತತ್ಸಮಾಪ್ತಿದಿನೇ ರಂಗನಾಯಕಸ್ಸಹಸಾ ತದಾ ॥೭೫॥**
**ಸ್ವಪ್ನೇ ಪ್ರಸನ್ನೋ ಭಗವಾನ್ ಗೋದಾದೇವ್ಯಾ: ಶ್ರಿಯ:ಪತಿ:**
**ವ್ಯಾಜಹಾರ ಶುಭಂ ವಾಕ್ಯಂ ಮನ್ದಸ್ಮಿತಮುಖಸ್ಸ ತಾಮ್ ॥೭೬॥**

ಹೀಗೆಯೇ ಧನುರ್ಮಾಸದ ಅಂತ್ಯಕ್ಕೆ ಮುವ್ವತ್ತು ಹಾಡುಗಳಿರುವ ತಿರುಪ್ಪಾವೈ ಯೆಂಬ ದಿವ್ಯಪ್ರಬಂಧವು ರಚಿಸಲ್ಪಟ್ಟಿತು.

ಅದು ಸಮಾಪ್ತಿಯಾದ ದಿನವೇ ಶ್ರಿಯ:ಪತಿಯಾದ ರಂಗನಾಯಕನು ಪ್ರಸನ್ನನಾಗಿ ಗೋದಾದೇವಿಯ ಸ್ವಪ್ನದಲ್ಲಿ ಕಾಣಿಸಿಕೊಂಡು ಮಂದಸ್ಮಿತಮುಖನಾಗಿ ಶುಭ ವಾಕ್ಯವನ್ನು ಹೇಳಿದನು.

ಪರಿತುಷ್ಟೋಽಸ್ಮಿ ಭದ್ರಂ ತೇ ಸ್ತೋತ್ರೇಣಾನೇನ ಬಾಲಿಕೇ
ಅರ್ಚನೇನ ವಿಶೇಷೇಣ ಧನುರ್ಮಾಸಿ ಕೃತೇನ ಚ ॥೭೭॥
ತ್ವತ್ಪಾಣಿಗ್ರಹಣಂ ಶೀಘ್ರಂ ಕರಿಷ್ಯಾಮಿ ನ ಸಂಶಯಃ
ಇತ್ಯುಕ್ತ್ವಾ ಸರ್ವಭೋಗಾಂಶ್ಚ ಗೋದಾಯೈ ಪ್ರದದೌ ಹರಿಃ ॥೭೮॥

ನಿನಗೆ ಭದ್ರವಾಗಲಿ. ಮಂಗಳವಾಗಲಿ ಹೇ ಬಾಲಿಕೆಯೇ! ನಾನು ನಿನ್ನ ಸ್ತೋತ್ರದಿಂದ ಪ್ರಸನ್ನನಾಗಿರುವೆನು. ವಿಶೇಷವಾಗಿ ಧನುರ್ಮಾಸದಲ್ಲಿ ಮಾಡಿದ ಅರ್ಚನೆಯಿಂದ ಪರಿತುಷ್ಟನಾಗಿರುವೆನು. ಶೀಘ್ರವೇ ನಿನ್ನ ಪಾಣಿಗ್ರಹಣವನ್ನು ಮಾಡಿಕೊಳ್ಳುವೆನು. ಇದರಲ್ಲಿ ಸಂಶಯವೇ ಬೇಡ ಎಂದು ಹೇಳಿ ಹರಿಯು ಗೋದೆಗೆ ಸರ್ವಭೋಗಗಳನ್ನೂ ಪ್ರದಾನ ಮಾಡಿದನು.

ತನ್ಮಾಸಾನ್ತದಿನೇ ಗೋದಾ ಸರ್ವಭೋಗಸಮನ್ವಿತಾ
ರಂಗೇಶೇನಾಖಿಲಾನ್ ಭೋಗಾನ್ ಬುಭುಜೇ ಹರಿಣಾ ಸಹ ॥೭೯॥
ಭೋಗೀತಿ ನಾಮ ತಸ್ಯಾಸೀತ್ ದಿವಸಸ್ಯ ತದಾನಘ
ಯಸ್ಮಿನ್ದಿನೇ ಸರ್ವಭೋಗಾನ್ ಶ್ರೀಗೋದಾ ಬುಭುಜೇ ತತಃ ॥೮೦॥

ಧನುರ್ಮಾಸದ ಸಮಾಪ್ತಿದಿನದಲ್ಲಿ ಗೋದೆಯು ಸರ್ವಭೋಗ ಸಮನ್ವಿತಳಾಗಿ ರಂಗೇಶನಾದ ಹರಿಯ ಸಮೇತವಾಗಿ ಅಖಿಲಭೋಗಗಳನ್ನೂ ಅನುಭವಿಸಿದಳು. ಆದುದರಿಂದಲೇ ಆ ದಿನಕ್ಕೆ ಭೋಗಿಯೆಂಬ ಹೆಸರುಂಟಾಯಿತು. ಯಾಕೆಂದರೆ ಆ ದಿನ ಶ್ರೀಗೋದೆಯು ದೇವರು ಕರುಣಿಸಿದ ಸಕಲ ಭೋಗಗಳನ್ನೂ ಅನುಭವಿಸಿದಳು.

ಭೂವ್ಯಾಸ್ತಲೇ ಶಾಯಿನೀ ಸಾ ನಿರಾಹಾರಾ ಯತವ್ರತಾ
ಧನುರ್ಮಾಸೇ ಸುಸಂಪೂಜ್ಯ ರಂಗೇಶಂ ರಾಧಿಕಾ ಯಥಾ ॥೮೧॥
ತದೇಕ ಹೃದಯಾ ತಸ್ಥೌ ಶ್ರೀಕೃಷ್ಣವಿರಹಾತುರಾ
ತಯಾ ಸಂಪೂಜಿತಸ್ಸಮ್ಯಕ್ ಗೋದಯಾ ರಙ್ಗರಾಟ್ ತದಾ॥೮೨॥
ಧನುರ್ಮಾಸೇಽನ್ತ್ಯದಿವಸೇ ಪ್ರತ್ಯಕ್ಷಮಗಮದ್ಧರಿಃ
ಗೋದಾವಿವಾಹದಿವಸಂ ತಮಿತ್ಯಾಹುರ್ಮನೀಷಿಣಃ ॥೮೩॥

ಅವಳು ಧನುರ್ಮಾಸ ಪೂರ್ತಿಯಾಗಿ ಭೂಮಿತಲದಲ್ಲಿಯೇ ಮಲಗುವವಳಾಗಿ, ನಿರಾಹಾರವಾಗಿ ನಿಯತವ್ರತೆಯಾಗಿ, ರಾಧಿಕೆಯ ಹಾಗೆ ರಂಗೇಶನನ್ನು ಸಂಪೂಜಿಸಿ ಅವನಲ್ಲೇ ನೆಟ್ಟಮನಸ್ಸುಳ್ಳವಳಾಗಿ ಶ್ರೀಕೃಷ್ಣ ವಿರಹಾತುರಳಾಗಿ ಕಾಲ ಕಳೆದಳು.

ಗೋದೆಯಿಂದ ಚೆನ್ನಾಗಿ ಸಂಪೂಜಿತನಾಗಿ ಧನುರ್ಮಾಸ ಮುಗಿಯುತ್ತಲೇ ರಂಗನಾಯಕನು ಗೋದೆಗೆ ಪ್ರತ್ಯಕ್ಷನಾದನು. ಆದಿನವನ್ನು ಮನೀಷಿಗಳಾದ ಭಕ್ತರು ಗೋದಾವಿವಾಹದ ದಿನವೆಂದು ಹೇಳುವರು.

**ವಿಧಾಯ ಮಙ್ಗಲಸ್ನಾನಂ ಬನ್ಧುಭಿಸ್ಸಹ ಸಾದರಮ್**
**ಉತ್ಸವಂ ಕಾರಯೇತ್ತತ್ರ ಸರ್ವಭೋಗಸಮೃದ್ಧಯೇ ॥೮೪॥**

ಆದಿನ ಮಂಗಳಸ್ನಾನ ಮಾಡಿ ಬಂಧುಗಳೊಂದಿಗೆ ಸಾದರವಾಗಿ ಸರ್ವಭೋಗ ಸಮೃದ್ಧಿಗಾಗಿ ಉತ್ಸವವನ್ನು ನಡೆಸಬೇಕು.

**ತತಸ್ಸ್ವಪ್ನಾತ್ಸಮುತ್ಥಾಯ ಗೋದಾ ಸನ್ತುಷ್ಟಮಾನಸಾ**
**ಪಿತ್ರೇ ನಿವೇದ್ಯ ತತ್ಸರ್ವಂ ನಿಶ್ಚಲಾ ಸುಖಮಾಸ್ಥಿತಾ ॥೮೫॥**

ಆಗ ಸ್ವಪ್ನದಿಂದ ಎದ್ದು ಗೋದೆಯು ಸಂತುಷ್ಟಮಾನಸಳಾಗಿ ಎಲ್ಲವನ್ನೂ ತಂದೆಗೆ ನಿವೇದಿಸಿ ನಿಶ್ಚಲ ಭಕ್ತಿಯೊಂದಿಗೆ ಸುಖವಾಗಿದ್ದಳು.

**ತತೋ ರಂಗೇಶ್ವರ: ಶ್ರೀಮಾನ್ ಸ್ವಶ್ರೀರಂಗಾಧಿಕಾರಿಣ:**
**ಇತ್ಯುವಾಚ ಪ್ರವಾಲೋಷ್ಠಸ್ಫುರದ್ದಶನಸುಪ್ರಭ: ॥೮೬॥**

ಆನಂತರ ಶ್ರೀರಂಗನಾಥನು ತನ್ನ ಶ್ರೀರಂಗದ ಅಧಿಕಾರಿಗಳಿಗೆ ಹವಳದಂತೆ ಶೋಭಿಸುವ ತುಟಿಗಳ ಮಧ್ಯದಿಂದ ಪ್ರಕಾಶಿಸುವ ದಂತ ಸೌಂದರ್ಯದ ಪ್ರಭೆಯೊಂದಿಗೆ ಇಂತೆಂದನು.

**ಮದೀಯೈರ್ಮಙ್ಗಳೈರ್ವಾದ್ಯೈ: ಸಕಲೈ: ಛತ್ರಚಾಮರೈ:**
**ನವರತ್ನಮಯೀಂ ದಿವ್ಯಾಂ ಮದೀಯಾಂ ಶಿಬಿಕಾಂ ಪರಾಮ್॥೮೭॥**
**ಆದಾಯ ಧನ್ವಿನಗರಂ ಸಮ್ಪ್ರಾಪ್ಯಾತ್ಯನ್ತವೈಭವೈ:**
**ವಿಷ್ಣುಚಿತ್ತಸುತಾಂ ಗೋದಾಮಾನಯಧ್ವಂ ಮಮಾನ್ತಿಕಮ್ ॥೮೮॥**

ನನ್ನ ಮಂಗಳವಾದ್ಯಗಳು, ಸಕಲ ಛತ್ರಚಾಮರಗಳು ನವರತ್ನಮಯವಾದ ನನ್ನ ಆ ದಿವ್ಯವಾದ ಪಲ್ಲಕ್ಕಿಯನ್ನೂ ತೆಗೆದುಕೊಂಡು ಅತ್ಯಂತ ವೈಭವದೊಂದಿಗೆ ಶ್ರೀವಿಲ್ಲಿಪುತ್ತೂರಿಗೆ ಹೋಗಿ ವಿಷ್ಣುಚಿತ್ತನ ಮಗಳಾದ ಗೋದೆಯನ್ನು ನನ್ನ ಸಮೀಪಕ್ಕೆ ಕರೆದು ತನ್ನಿರಿ, ಎಂದು.

**ಅಜ್ಗೇಕೃತ್ಯಾಜ್ಞಾಸಾ ಸರ್ವೇ ರಂಗೇಶಾಜ್ಞಾಂ ತ್ವರಾನ್ವಿತಾ:**
**ಧನ್ವಿನವ್ಯಪುರಂ ಜಗ್ಮು: ಗೋದಾನಯನಕಾರಣಾತ್ ॥೮೯॥**
**ವಿಷ್ಣುಚಿತ್ತಾಯ ತತ್ಸರ್ವಂ ತಸ್ಮೈ ಸಮ್ಯಗಬೋಧಯನ್**

ರಂಗೇಶನ ಆಜ್ಞೆಯನ್ನು ಶಿರಸಾವಹಿಸಿ ಆ ಅಧಿಕಾರಿಗಳೆಲ್ಲರೂ ತ್ವರೆಯೊಂದಿಗೆ ಗೋದೆಯನ್ನು ಕರೆತರಲೊಸುಗ ಶ್ರೀವಿಲ್ಲಿಪುತ್ತೂರಿಗೆ ತೆರಳಿದರು. ಅಲ್ಲಿ ಶ್ರೀವಿಷ್ಣುಚಿತ್ತನಿಗೆ ನಡೆದ ವೃತ್ತಾಂತವನ್ನು ತಿಳಿಯಹೇಳಿದರು.

**ತೇಷಾಂ ತದ್ವಚನಂ ಶ್ರುತ್ವಾ ಮಹತ್ಕರ್ಣಾಮೃತಂ ಚ ಸ: ॥೯೦॥**
**ವಿಸ್ಮಿತಸ್ಸಂಪ್ರಹೃಷ್ಟೋಽಥ ತಾನ್ಸರ್ವಾನ್ಸಮಪೂಜಯತ್**

ಅವರ ಕರ್ಣಾಮೃತವಾದ ಮಾತುಗಳನ್ನು ಕೇಳಿ ಅತಿಪ್ರಹೃಷ್ಟನೂ ವಿಸ್ಮಿತನೂ ಆಗಿ ವಿಷ್ಣುಚಿತ್ತನು ಅವರನ್ನೆಲ್ಲಾ ಉಪಚರಿಸಿ ಪೂಜಿಸಿದನು.

**ಶ್ರೀಧನ್ವಿನವ್ಯಪುರನಾಥಾಯ ತತ್ಸರ್ವಂ ವಿಷ್ಣವೇಽಖಿಲಮ್ ॥೯೧॥**
**ವಿಜ್ಞಾಪ್ಯ ಸಾದರಂ ಭಕ್ತ್ಯಾ ತೇನಾನುಜ್ಞಾಪಿತಸ್ತದಾ**
**ತತ: ಶ್ರೀರಙ್ಗಗಮನೇ ಚಕಾರ ಮತಿಮಾನ್ಮತಿಮ್ ॥೯೨॥**

ಶ್ರೀವಿಲ್ಲಿಪುತ್ತೂರಿನ ನಾಥನಾದ ವಿಷ್ಣುವಿಗೆ ನಡೆದುದೆಲ್ಲವನ್ನೂ ಭಕ್ತ್ಯಾದರಗಳೊಂದಿಗೆ ವಿಜ್ಞಾಪಿಸಿದನು. ವಟಪತ್ರಶಾಯಿಯಿಂದ ಅನುಜ್ಞಾಪಿತನಾಗಿ ಮತಿವಂತನಾದ ವಿಷ್ಣುಚಿತ್ತನು ಶ್ರೀರಂಗಕ್ಕೆ ಹೋಗಲು ಸಂಕಲ್ಪಿಸಿದನು.

**ವಲ್ಲಭಾಯ ಸ್ವಶಿಷ್ಯಾಯ ಗೋದೋದ್ವಾಹಂ ಚ ಶಂಸಿತುಮ್**
**ಭೂಪಾಯ ಪ್ರಾಹಿಣೋತ್ ಶಿಷ್ಯಾನ್ ಭಟ್ಟೇಶೋ**
**ಮಧುರಾಂ ಪುರೀಮ್ ॥೯೩॥**

ತನ್ನ ಶಿಷ್ಯನೂ ಪಾಂಡ್ಯದೇಶದ ರಾಜನೂ ಆದ ವಲ್ಲಭದೇವನಿಗೆ ಗೋದಾ ವಿವಾಹದ ಸುದ್ದಿಯನ್ನು ತಿಳಿಸಲು ತನ್ನ ಶಿಷ್ಯರನ್ನು ಭಟ್ಟನಾಥನು ಮಧುರಾಪುರಿಗೆ ಕಳುಹಿಸಿದನು.

**ಪ್ರಗೃಹ್ಯ ಶಿರಸಾ ರಾಜಾ ಗುರೋರಾಜ್ಞಾಮಲಂಘಿತಾಮ್**
**ಧನ್ವಿನವ್ಯಪುರಂ ಪ್ರಾಪ ಚತುರಂಗಬಲಾನ್ವಿತ: ॥೯೪॥**

ಗುರುವಿನ ಆಜ್ಞೆಯನ್ನು ಮೀರದೆ ಶಿರಸಾವಹಿಸಿ ಆ ರಾಜನು ಚತುರಂಗ ಬಲಸೈನ್ಯದೊಡನೆ ಶ್ರೀವಿಲ್ಲಿಪುತ್ತೂರಿಗೆ ಬಂದನು

**ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾ ಯಥಾ**
**ಗೋದಾದೇವೀ ತಥೈವಾಸೀತ್ ಪಾತಿವ್ರತ್ಯಪರಾಯಣಾ ॥೯೫॥**

ಸೂರ್ಯನಿಂದ ಪ್ರಭೆಯು ಹೇಗೆ ಅನನ್ಯಳೊ ಹಾಗೆ ನಾನು ರಾಘವನಿಂದ ಅನನ್ಯಳು ಎಂದು ಸೀತಾದೇವಿಯು ಹೇಳಿದ ಹಾಗೆಯೇ ಗೋದಾದೇವಿಯೂ ಪಾತಿವ್ರತ್ಯ ಪರಾಯಣಳಾಗಿದ್ದಳು.

**ಸರ್ವಲೋಕೇಶ್ವರಸ್ಯೈವಂ ರಙ್ಗೇಶಸ್ಯ ಪ್ರಿಯಾ ಸತೀ**
**ನೋಚಿತಂ ದೃಷ್ಟಿಪತನಂ ತದನ್ಯಪುರುಷಸ್ಯ ಹಿ ॥೯೬॥**
**ಇತ್ಯೇವಂ ಸಮ್ಯಗಾಲೋಚ್ಯ ಭಟ್ಟನಾಥೋ ಮಹಾಮತಿ:**

ಹೀಗೆ ಸರ್ವಲೋಕೇಶ್ವರನಾದ ರಂಗೇಶನ ಪ್ರಿಯೆ ಆದುದರಿಂದ ಅನ್ಯಪುರುಷರ ದೃಷ್ಟಿಯು ಅವಳ ಮೇಲೆ ಬೀಳುವುದು ಅನುಚಿತವಷ್ಟೆ ಎಂದು ಮಹಾಮತಿಯಾದ ಭಟ್ಟನಾಥನು ಆಲೋಚಿಸಿದನು.

**ಶಿಬಿಕಾಂ ತಾಂ ಸಮಾರೋಪ್ಯ ಗೋದಾಂ ದುಹಿತರಂ ತದಾ॥೯೭॥**
**ಪೀತಾಮ್ಬರೇಣ ಸಂಚ್ಛಾದ್ಯ ಸುದೃಢಂ ಶಿಬಿಕಾಂ ಬಹಿ:**
**ಮಹತಾ ವೈಭವೇನೈವ ರಙ್ಗೇಶಚ್ಛತ್ರಚಾಮರೈ: ॥೯೮॥**
**ರಾಜ್ಞಾ ವಲ್ಲಭದೇವೇನ ತತ್ರತ್ಯೈರ್ನಿಖಿಲೈರ್ಜನೈ:**
**ಭೇರೀಮೃದಙ್ಗನಾದೈಶ್ಚ ಜಯಶಬ್ದೈಶ್ಚ ವನ್ದಿನಾಮ್ ॥೯೯॥**
**ಪ್ರತಸ್ಥೇ ಸಹಸಾ ಧೀಮಾನ್ ಶ್ರೀರಙ್ಗಂ ಪ್ರತಿ ಸಾದರಮ್**

ಮಗಳಾದ ಗೋದಾದೇವಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ, ಅದನ್ನು ಸುತ್ತಲೂ ಪೀತಾಂಬರದಿಂದ ದೃಢವಾಗಿ ಆಚ್ಛಾದಿಸಿ ರಂಗೇಶನು ಕಳುಹಿಸಿದ ಛತ್ರಚಾಮರಗಳನ್ನು ಹೊತ್ತುಕೊಂಡು ವಲ್ಲಭದೇವನೊಡನೆಯೂ ಅಲ್ಲಿದ್ದ ಸಮಸ್ತ ಜನತೆಯೊಡನೆಯೂ ಭೇರೀ ಮೃದಂಗ ನಾದದೊಂದಿಗೂ ಭಕ್ತರ ಜಯ ಜಯಕಾರ ಶಬ್ದದೊಂದಿಗೂ ಧೀಮಂತನಾದ ಭಟ್ಟನಾಥನು ಸಾದರದಿಂದ ಮೆರವಣಿಗೆಯನ್ನು ಮಹಾವೈಭವದೊಂದಿಗೆ ಶ್ರೀರಂಗದ ಕಡೆಗೆ ಕೊಂಡೊಯ್ದನು.

**ಧನ್ವಿಮಙ್ಗಲಮಾರಭ್ಯ ಚಾಶ್ರೀರಙ್ಗಂ ಸಮನ್ತತಃ ॥೧೦೦॥**
**ಸುಪುಷ್ಪಕಾಯಮಾನೈಶ್ಚ ನಿವಾಸಸ್ಥಾನಮಣ್ಡಪೈಃ**
**ತನ್ಮಾರ್ಗಂ ಸಹಸಾ ಸಮ್ಯಗಲಂಕಾರಂ ಪ್ರಚಕ್ರಿರೇ ॥೧೦೧॥**

ಶ್ರೀವಿಲ್ಲಿಪುತ್ತೂರಿನಿಂದ ಆರಂಭಿಸಿ ಶ್ರೀರಂಗದವರೆವಿಗೆ ಉದ್ದಕ್ಕೂ ಇಕ್ಕೆಲಗಳಲ್ಲೂ ಇದ್ದ ನಿವಾಸಸ್ಥಾನಗಳು ಪುಷ್ಪಕವಿಮಾನದಂತೆ ಕಿಕ್ಕಿರಿದು ತುಂಬಿಹೋಗಿ, ಪುಷ್ಪಗಳಿಂದ ಸಮಲಂಕೃತವಾಗಿಸಲ್ಪಟ್ಟಿದ್ದವು.

**ವೈಕುಂಠಮಾರ್ಗವದ್ರಙ್ಗಮಾರ್ಗಸ್ತೇನಾಭವತ್ತದಾ**
**ಅಯಂ ರಙ್ಗೇಶ್ವರೋ ದೇವೋ ವಿಷ್ಣುಚಿತ್ತಸುತಾಮಿಮಾಮ್॥೧೦೨॥**

**ಕಥಂ ಕರೋತಿ ಮನುಜಾಂ ಪಾಣಿಗ್ರಹಣಮದ್ಭುತಮ್**
**ಇತಿ ತದ್ ದ್ರಷ್ಟುಕಾಮಾಸ್ತೇ ವಿಸ್ಮಯಾವಿಷ್ಟಮಾನಸಾಃ ॥೧೦೩॥**

**ಶ್ರೀರಂಗಂ ನಿಖಿಲಾ ಜಗ್ಮುಃ ಚೋಲಪಾಂಡ್ಯಾದಿಮಾನವಾಃ**
**ಶ್ರೀರಙ್ಗನಗರಂ ಸರ್ವೈರ್ಜನೈರಾಪೂರಿತಂ ಬಭೌ**
**ನಿತ್ಯಮುಕ್ತಸಮಾಕೀರ್ಣಂ ವೈಕುಂಠನಗರಂ ಯಥಾ ॥೧೦೪॥**

ಶ್ರೀರಂಗಕ್ಕೆ ಹೋಗುವ ಮಾರ್ಗವು ವೈಕುಂಠಕ್ಕೆ ಹೋಗುವ ಮಾರ್ಗದಂತೆ ಶೋಭಿಸಿತು. ಈ ರಂಗೇಶನು ದೇವನು. ಗೋದಾದೇವಿಯು ಮನುಜಳು. ಇವರೀರ್ವರ ವಿವಾಹವು ಪಾಣಿಗ್ರಹಣವು ಹೇಗೆ ನೆರವೇರುವುದೋ ಎಂಬ ಕುತೂಹಲದೊಂದಿಗೆ ವಿಸ್ಮಿತರಾಗಿ ಅದನ್ನು ನೋಡಲು ಆಶೆಯುಳ್ಳವರಾಗಿ ಚೋಳಪಾಂಡ್ಯಾದಿಗಳಲ್ಲಿ ಇದ್ದ ಮಾನವರೆಲ್ಲರೂ ಶ್ರೀರಂಗಕ್ಕೆ ಆಗಮಿಸಿದರು. ಶ್ರೀರಂಗನಗರವು ಸರ್ವಜನ ರಿಂದಲೂ ಕಿಕ್ಕಿರಿದು ಹೋಯಿತು. ನಿತ್ಯಮುಕ್ತರುಗಳಿಂದ ಕಿಕ್ಕಿರಿದ ವೈಕುಂಠದಂತೆ ಶ್ರೀರಂಗವು ಕಾಣಿಸಿತು.

**ರಂಗೇಶಪಾಣಿಗ್ರಹಣತ್ವರಯಾ ಶ್ರೀಹರಿಪ್ರಿಯಾ**
**ಕೃತಾಞ್ಜಲಿಪುಟಾ ಭಕ್ತ್ಯಾ ಚಿನ್ತಯನ್ತೀ ತಮೇವ ಸಾ ॥೧೦೫॥**

ರಂಗೇಶನ ಪಾಣಿಗ್ರಹಣ ಮಾಡಿಕೊಳ್ಳುವ ತ್ವರೆಯಿಂದ ಶ್ರೀಹರಿಪ್ರಿಯೆಯಾದ ಗೋದೆಯು ಭಕ್ತಿಯಿಂದ ಕೈಮುಗಿದುಕೊಂಡು ಅವನನ್ನೇ ಚಿಂತಿಸುತ್ತಿದ್ದಳು.

**ಶ್ರೀಗೋದಾ ಶಿಬಿಕಾರೂಢಾ ವೈಷ್ಣವೈಃ ಕೃತಮಙ್ಗಲಾ**
**ಮಹತಾ ವೈಭವೇನೈವ ದೇಶಿಕಾನುಜ್ಞಯಾ ತದಾ ॥೧೦೬॥**
**ನಿಚುಲಾನಗರಾತ್ಪೂರ್ಣಂ ಪ್ರತಸ್ಥೇ ರಙ್ಗಮುತ್ತಮಮ್**

ಶಿಬಿಕಾರೂಢಳಾದ ಗೋದೆಯು ವೈಷ್ಣವರಿಂದ ಮಂಗಳಾಶಾಸನ ಮಾಡಲ್ಪಟ್ಟು ತನ್ನ ಗುರುವಿನ ಆದೇಶದಿಂದ ನಿಚುಲಾಪುರಿಯಾದ ಒರೈಯೂರಿನಿಂದ ಶ್ರೀರಂಗಕ್ಕೆ ಹೊರಟಳು.

**ಶ್ರೀವೈಷ್ಣವಾಃ ಪಠನ್ತೋಽಗ್ರೇ ಪ್ರಬನ್ಧಾನ್ ಭಗವತ್ಪರಾನ್ ॥೧೦೭॥**
**ಅನ್ಯೋನ್ಯಾಬದ್ಧಹಸ್ತಾಶ್ಚ ನಿರ್ಯಯುಶ್ಶುಭ್ರವಾಸಸಃ ॥೧೦೮॥**

ಶ್ರೀವೈಷ್ಣವರು ಶುಭ್ರವಸ್ತ್ರಧಾರಿಗಳಾಗಿ ಭಗವತ್ಪರವಾದ ದಿವ್ಯಪ್ರಬಂಧಗಳನ್ನು ಸೇವೆಮಾಡುತ್ತಾ ಅನ್ಯೋನ್ಯಹಸ್ತಗಳನ್ನು ಸರಪಳಿಯಂತೆ ಬಿಗಿದುಕೊಂಡು ಮೆರವಣಿಗೆಯ ಮುಂಭಾಗದಲ್ಲಿ ನಡೆಯುತ್ತಿದ್ದರು.

**ತಸ್ಯಾಃ ಪಾರ್ಶ್ವದ್ವಯೇ ದೇವ್ಯಾಃ ಉಭೌ ಭಟ್ಟೇಶವಲ್ಲಭೌ**
**ವಿರೇಜತುರ್ಮಹಾತ್ಮಾನೌ ಗೋದಾಸಂರಕ್ಷಣೋದ್ಯತೌ ॥೧೦೯॥**

ಆ ದೇವಿಯ ಎರಡು ಪಾರ್ಶ್ವಗಳಲ್ಲೂ ಭಟ್ಟನಾಥ ಮತ್ತು ವಲ್ಲಭ ದೇವರು ಗೋದೆಯ ಸಂರಕ್ಷಣೆಯನ್ನು ಮಾಡುತ್ತಾ ವಿರಾಜಿಸುತ್ತಿದ್ದರು.

**ಶಿಬಿಕಾಯಾಸ್ತತಃಪಶ್ಚಾತ್ಕುರ್ವನ್ತಃ ಸ್ವಸ್ತಿವಾಚನಮ್**
**ದ್ವಿಜಸಂಘಾಶ್ಚ ಶತಶೋ ರವೇಣ ಮಹತಾ ತದಾ ॥೧೧೦॥**

ಆ ಶಿಬಿಕೆಯನ್ನು ಹಿಂಬಾಲಿಸುತ್ತಾ ನಡೆಯುತ್ತಿದ್ದ ದ್ವಿಜಸಂಘವು ನೂರಾರು ಸಂಖ್ಯೆಯಲ್ಲಿದ್ದು ಗೋದೆಗೆ ಸ್ವಸ್ತಿವಾಚನವನ್ನು ಪಠಿಸುತ್ತಾ ಮಹಾಘೋಷದೊಂದಿಗೆ ಬರುತ್ತಿದ್ದರು.

**ತತಸ್ಸಂಕೀರ್ತನಪರಾ ಬ್ರಾಹ್ಮಣಾ ಮಧುರಸ್ವರಾಃ**
**ಗಾನನಿರ್ಜಿತಗನ್ಧರ್ವಾಃ ಯಯುರ್ಭಾಗವತಾಸ್ತತಃ ॥೧೧೧॥**

ಅವರನ್ನು ಹಿಂಬಾಲಿಸುತ್ತ ಮಧುರಸ್ವರದಲ್ಲಿ ಸಂಕೀರ್ತನವನ್ನು ಮಾಡುತ್ತ ಗಾನದಲ್ಲಿ ಗಂಧರ್ವರನ್ನು ಜಯಿಸುತ್ತ ಬ್ರಾಹ್ಮಣ ಭಾಗವತರು ಬರುತ್ತಿದ್ದರು.

**ವೇತ್ರಹಸ್ತಾ: ಪ್ರದೃಶ್ಯನ್ತೇ ಶತಶೋಽಥ ಸಹಸ್ರಶ:**
**ಶಿಬಿಕಾಯಾಶ್ಚತುರ್ದಿಕ್ಷು ಸುವಸ್ತ್ರಾಶ್ಚಾರುಭೂಷಣಾ: ॥೧೧೨॥**

ಅಲ್ಲಲ್ಲಿ ನೂರಾರು ಸಾವಿರಾರು ವೇತ್ರಹಸ್ತರು ಶಿಬಿಕೆಯ ನಾಲಕೂ ಕಡೆಗಳಲ್ಲಿ ಸುವಸ್ತ್ರಧಾರಿಗಳಾಗಿ ಚಾರುಭೂಷಣಧರರಾಗಿ ಕಾಣಿಸುತ್ತಿದ್ದರು.

**ವಾಚಾಮಗೋಚರೇಣೈವ ವೈಭವೇನ ಮಹತ್ಯಸೌ**
**ವಿವೇಶ ರಙ್ಗನಗರಂ ಸಪ್ತಪ್ರಾಕಾರಶೋಭಿತಮ್ ॥೧೧೩॥**

ವಾಚಾಮಗೊಚರವಾದ ಮಹಾವೈಭವದೊಂದಿಗೆ ಮೆರವಣಿಗೆಯು ಸಪ್ತ ಪ್ರಾಕಾರ ಶೋಭಿತವಾದ ರಂಗನಗರವನ್ನು ಪ್ರವೇಶಿಸಿತು.

**ವಿಚಿತ್ರತೋರಣವತೀ ವಿಚಿತ್ರಧ್ವಜಮಾಲಿನೀ**
**ವಿಚಿತ್ರಚಿತ್ರದೀಪಾಲಿಚಿತ್ರವೀಥೀ ವಿರಾಜತೇ ॥೧೧೪॥**
**ಸಾ ಸಪ್ತಾವರಣಾನ್ಯತ್ರ ಪ್ರದಕ್ಷಿಣಮಥಾಕರೋತ್**

ಶ್ರೀರಂಗನಗರದ ಪ್ರಾಕಾರಗಳ ಚಿತ್ರವೀಧಿಗಳು ವಿಚಿತ್ರತೋರಣಗಳಿಂದಲೂ ವಿಚಿತ್ರಧ್ವಜಗಳಿಂದಲೂ ಚಿತ್ರವಿಚಿತ್ರದೀಪಾವಳಿಗಳಿಂದಲೂ ಶೋಭಿಸುತ್ತಿದ್ದವು. ಅವಳು ಸಪ್ತಪ್ರಾಕಾರಗಳನ್ನೂ ಪರಿಕ್ರಮಪ್ರದಕ್ಷಿಣೆ ಮಾಡಿದಳು.

**ಹೇಮಾದ್ರಿಶಿಖರಾಭಾನಿ ಚಿತ್ರಸೌಧಾನಿ ತಾ: ಸ್ತ್ರಿಯ: ॥೧೧೫॥**
**ನಿರ್ಜಿತಾಮರಸೌನ್ದರ್ಯಾ: ಶಿಞ್ಜನ್ಮಞ್ಜೀರಭೂಷಣಾ:**
**ಸಮಾರುಹ್ಯಾಥ ಶತಶೋ ಗೋದಾದರ್ಶನಕೌತುಕಾ: ॥೧೧೬॥**
**ವವೃಷು: ಪುಷ್ಪವರ್ಷಾಣಿ ಗೋದಾಯಾ: ಶಿಬಿಕೋಪರಿ**

ಮೇರುಪರ್ವತದ ಶಿಖರಗಳಂತೆ ಕಂಗೊಳಿಸುತ್ತಿದ್ದ ಚಿತ್ರಸೌಧಗಳನ್ನು, ಘಲ್ ಘಲ್ ಎನ್ನುವ ಕಾಲಂದುಗೆಗಳನ್ನೂ ಇತರ ಭೂಷಣಗಳನ್ನೂ ಧರಿಸಿದ, ಅಮರ ಸ್ತ್ರೀಸೌಂದರ್ಯವನ್ನು ಜಯಿಸಿದ ಆ ಸ್ತ್ರೀಯರು ನೂರಾರು ಸಂಖ್ಯೆಯಲ್ಲಿ ಗೋದಾ ದರ್ಶನ ಕುತೂಹಲದಿಂದ ಹತ್ತಿಕೊಂಡು ನೋಡುತ್ತಿದ್ದರು. ಅವರು ಗೋದೆಯ ಪಲ್ಲಕ್ಕಿಯ ಮೇಲೆ ಪುಷ್ಪದ ಮಳೆಯನ್ನು ಕರೆದರು.

**ಸೌಧಾನಿ ಗೋಪುರಾಣ್ಯಾಶು ಪ್ರಾಕಾರಾನ್ಮಣ್ಡಪಾನ್ ಜನಾ:॥೧೧೭॥**
**ಆರುಹ್ಯ ತಸ್ಥುಸ್ತೇ ಸರ್ವೇ ತದುತ್ಸವ ದಿದೃಕ್ಷವ:**

ಅಲ್ಲಿನ ಜನರೆಲ್ಲರೂ, ಸೌಧಗಳನ್ನೂ ಗೋಪುರಗಳನ್ನೂ ಪ್ರಾಕಾರಗಳನ್ನೂ ಹತ್ತಿ ನಿಂತು ಗೋದೆಯ ಮೆರವಣಿಗೆಯನ್ನು ಕಣ್ಣಾರ ನೋಡುತ್ತಿದ್ದರು.

**ತತ್ಸರ್ವಂ ಜನಸಮ್ಪೂರ್ಣಮದೃಶ್ಯತ ಮಹಾದ್ಭುತಮ್॥೧೧೮॥**
**ಏವಂ ಪ್ರದಕ್ಷಿಣಂ ಕೃತ್ವಾ ತತ್ರಾವರಣಸಪ್ತಕಮ್**
**ಆಸಸಾದಾಞ್ಜಸಾ ಗೋದಾ ಶ್ರೀಮಚ್ಚನ್ದನಮಂಡಪಮ್ ॥೧೧೯॥**

ಅಲ್ಲಿನ ಅಗಾಧ ಜನಸ್ತೋಮವು ಮಹಾದ್ಭುತವಾಗಿ ರಾರಾಜಿಸುತ್ತಿತ್ತು. ಹೀಗೆಯೇ ಏಳು ಪ್ರಾಕಾರಗಳನ್ನು ಪ್ರದಕ್ಷಿಣೆ ಮಾಡಿ ದಾಟಿ ಗೋದೆಯು ಶೀಘ್ರವಾಗಿ ಶ್ರೀಚಂದನಮಂಡಪಕ್ಕೆ ಬಿಜಮಾಡಿದಳು.

**ಔತ್ಸವೋ ಭಗವಾಂಸ್ತತ್ರ ಶ್ರೀಸುನ್ದರವರಾಭಿಧ:**
**ವಿಧಾಯ ಮಙ್ಗಳಸ್ನಾನಂ ಸರ್ವಾಲಂಕಾರಶೋಭಿತ: ॥೧೨೦॥**
**ಪುಣ್ಯಾಹವಾಚನಂ ಕೃತ್ವಾ ಚಾಂಕುರಾರೋಪಣಂ ತಥಾ**
**ವಿಧಿಜ್ಞೈರ್ಬ್ರಾಹ್ಮಣೈಸ್ಸಾಕಂ ವೇದವೇದಾನ್ತಪಾರಗೈ: ॥೧೨೧॥**
**ಗೋದಾಗಮನಮಾಕಾಂಕ್ಷನ್ ತಸ್ಥೌ ತತ್ರ ಸ ಮಣ್ಡಪೇ**

ಆ ಚಂದನಮಂಡಪದಲ್ಲಿ ಸುಂದರವರನಾದ ಅಳಗಿಯ ಮಣವಾಳನ್ ಎಂಬ ಉತ್ಸವಮೂರ್ತಿಯು ಮಂಗಳಸ್ನಾನವನ್ನು ಮಾಡಿ ಸರ್ವಾಲಂಕಾರ ಭೂಷಿತನಾಗಿ ಪುಣ್ಯಾಹವಾಚನವನ್ನೂ ಅಂಕುರಾರೋಪಣವನ್ನೂ ಮಾಡಿಸಿ ವೇದವೇದಾಂತ ಪಾರಗರಾದ ವಿಧಿಜ್ಞರಾದ ಬ್ರಾಹ್ಮಣರೊಡನೆ, ಗೋದೆಯ ಆಗಮನವನ್ನು ಪ್ರತೀಕ್ಷಿಸುತ್ತ ಕಾದುಕೊಂಡಿದ್ದನು.

**ಸಮಾಗತಾಂ ಸ ತಾಂ ಗೋದಾಂ ರಙ್ಗೇಶೋ ವೀಕ್ಷ್ಯ ಹರ್ಷಿತ: ॥೧೨೨॥**
**ಸುಮುಹೂರ್ತೇ ಸುಲಗ್ನೇ ಚ ದ್ವಿಜದೇವಾಗ್ನಿಸನ್ನಿಧೌ**
**ಚಕಾರ ಪಾಣಿಗ್ರಹಣಂ ಗೋದಾದೇವ್ಯಾ: ಶ್ರಿಯ:ಪತಿ: ॥೧೨೩॥**

ಗೋದಾದೇವಿಯು ಬಂದು ಸೇರಿದ ಒಡನೆ ಶ್ರೀರಂಗೇಶನು ಅವಳನ್ನು ನೋಡಿ ಹರ್ಷಿತನಾಗಿ ಸುಲಗ್ನದಲ್ಲೂ ಸುಮುಹೂರ್ತದಲ್ಲೂ ದ್ವಿಜದೇವಾಗ್ನಿಸನ್ನಿಧಿಯಲ್ಲಿ ಶ್ರಿಯ:ಪತಿಯು ಗೋದಾದೇವಿಯ ಪಾಣಿಗ್ರಹಣವನ್ನು ಮಾಡಿಕೊಂಡನು.

**ವಿವಾಹವಮ್ ಶೇಷಹೋಮಾನ್ತಂ ವಿಧಿಜ್ಞೈರ್ವಿಪ್ರಸತ್ತಮೈ:**
**ನಿರ್ವರ್ತ್ಯ ವಿಧಿವತ್ಸಮ್ಯಗ್ವಿಪ್ರಾಶೀ: ಕೃತಮಙ್ಗಳ: ॥೧೨೪॥**
**ಪ್ರಹರ್ಷಮತುಲಂ ಪ್ರಾಪ ಶ್ರೀಸುನ್ದರವರಸ್ತದಾ**

ವಿಧಿಜ್ಞರಾದ ವಿಪ್ರೋತ್ತಮರಿಂದ ಶೇಷಹೋಮಾಂತವಾಗಿ ವಿವಾಹವ ಚೆನ್ನಾಗಿ ವಿಧಿವತ್ತಾಗಿ ನಿರ್ವರ್ತಿಸಿ, ವಿಪ್ರರಿಂದ ಆಶೀರ್ವಾದಪೂರ್ವಕವಾ ಮಂಗಳಾಶಾಸನ ಮಾಡಿಸಿ ಶ್ರೀಸುಂದರವರನು ಅತೀವ ಪ್ರಹರ್ಷವನ್ನು ಹೊಂದಿದನ

**ರಙ್ಗೇಶಪಾಣಿಗ್ರಹಣಾತ್ ಗೋದಾ ಪರಮಹರ್ಷಿತಾ ॥೧೨೫॥**
**ಏವಂ ಸ್ವಯಂವರೇ ಗೋದಾಂ ವರಣಸ್ರಕ್ಕರಾಂ ತದಾ**
**ರಙ್ಗೇಶ: ಪ್ರೀತಿತ: ಸ್ನಿಗ್ಧಂ ದೃಷ್ಟ್ವಾ ತಾಂ ನಿಕಟೇ ಸ್ಥಿತ: ॥೧೨೬॥**
**ತಯಾ ಚ ಪಶ್ಯತಾಂ ತೇಷಾಂ ವರಣಸ್ರಗ್ವೃತೋಽಭವತ್**

ರಂಗೇಶನ ಪಾಣಿಗ್ರಹಣದಿಂದ ಗೋದಾದೇವಿಯೂ ಪರಮ ಹರ್ಷಿತಳಾದಳ ಅನಂತರ, ಸ್ವಯಂವರದಲ್ಲಿ ವರಣಮಾಲೆಯೊಂದಿಗೆ ನಿಂತಿದ್ದ ಗೋದಾದೇವಿಯನ ನೋಡಿ ರಂಗೇಶನು ಪ್ರೀತಿ ಸ್ನೇಹಗಳೊಂದಿಗೆ ಅವಳ ಎದುರಿಗೆ ನಿಂತು ಅವ ಹಸ್ತದಿಂದ ವರಣಮಾಲೆಯಿಂದ ಅಲಂಕೃತನಾದನು.

**ದೃಷ್ಟ್ವಾಥ ವಿಷ್ಣುಚಿತ್ತೋಽಪಿ ವೃತಂ ಶ್ರೀರಙ್ಗನಾಯಕಮ್॥೧೨೭॥**
**ಪ್ರೇಮ್ಣಾ ಪ್ರತ್ಯುಜ್ಜಗಾಮಾಥ ಹೃಷ್ಟಶ್ಚ ಪ್ರಣನಾಮ ಚ**
**ಪೂಜಯಾಮಾಸ ಚಾರ್ಘ್ಯಾದಿಮಧುಪರ್ಕಾದಿಭಿರ್ಹರಿಮ್॥೧೨೮॥**

ಶ್ರೀವಿಷ್ಣುಚಿತ್ತನೂ ಹೀಗೆ ವರಿಸಲ್ಪಟ್ಟ ರಂಗೇಶನನ್ನು ನೋಡಿ ಪ್ರೇಮ ಪೂರ್ವಕವಾಗಿ ಅವನ ಸಮೀಪಕ್ಕೆ ಬಂದು ಹೃಷ್ಟನಾಗಿ ಪ್ರಣಾಮವನ್ನು ಎಸಗಿದನು. ಶ್ರೀವಿಷ್ಣುಚಿತ್ತನು ಅರ್ಘ್ಯಪಾದ್ಯಾಚಮನೀಯ ಮಧುಪರ್ಕಗಳಿಂದ ಹರಿಯನ್ನು ಪೂಜಿಸಿದನು.

**ಸಭಾರ್ಯಸ್ತಮಲಂಕೃತ್ಯ ವಸ್ತ್ರಾಭರಣಧೇನುಭಿ:**
**ಗನ್ಧಪುಷ್ಪಾಕ್ಷತೈ: ಪೀತೈ: ಉಪವೀತಾದಿಶೋಭಿತಮ್ ॥೧೨೯॥**
**ಪಾಣಿಗ್ರಹವಿಧಾನೇನ ಗೋದಾಹಸ್ತಂ ಚ ಧಾರಯನ್**
**ತಸ್ಮೈ ಪರಾತ್ಮನೇ ರಙ್ಗನಾಥಾಯ ಕರಮಾದರಾತ್ ॥೧೩೦॥**
**ತಸ್ಯಾಸ್ಸಮರ್ಪಯಾಮಾಸ ಗೋದಾಯಾ: ಸಮಲಂಕೃತಮ್**

ನಂತರ ತನ್ನ ಭಾರ್ಯೆಯೊಂದಿಗೆ ಕೂಡಿ ಹರಿಯನ್ನು ವಸ್ತ್ರ ಆಭರಣ ಧೇನುಗಳಿಂದ ಅಲಂಕರಿಸಿದನು. ಗಂಧಪುಷ್ಪಾಕ್ಷತೆಗಳಿಂದಲೂ ಉಪವೀತಾದಿ ಗಳಿಂದಲೂ ಶೊಭಿಸುವಂತೆ ಮಾಡಿ ಪಾಣಿಗ್ರಹಣ ವಿಧಿಯಿಂದ ಸಮಲಂಕೃತವಾದ ಗೋದಾಹಸ್ತವನ್ನು ತನ್ನ ಕೈಯ್ಯಲ್ಲಿ ಹಿಡಿದುಕೊಂಡು ಪರಮಾತ್ಮನಾದ ರಂಗನಾಥನಿಗೆ ಸಮರ್ಪಿಸಿದನು.

**ಮಙ್ಗಲಾಶಾಸನೈರ್ವೇದಪುರಾಣೈ ಋಷಿಕಲ್ಪಿತೈಃ ॥೧೩೧॥**
**ತಾಂ ಚ ಭೂಮ್ಯಂಶಸಮ್ಭೂತಾಂ ತಸ್ಮೈತ್ವೇವಂ ಸಮರ್ಪಯತ್**

ಹೀಗೆ ಮಂಗಳಾಶಾಸನಪೂರ್ವಕವಾಗಿಯೂ ಋಷಿಗಳಿಂದ ಕಲ್ಪಿತವಾದ ವೇದಪುರಾಣಗಳಿಂದಲೂ ಭೂಮ್ಯಂಶಸಂಭೂತಳಾದ ಗೋದೆಯನ್ನು ರಂಗೇಶನಿಗೆ ಸಮರ್ಪಿಸಿದನು.

**ತತಶ್ಚಾಗ್ನಿಂ ಪ್ರತಿಷ್ಠಾಪ್ಯ ಹಾವಯಾಮಾಸ ವೈಷ್ಣವೈಃ ॥೧೩೨॥**
**ಅಗ್ನೇಸ್ಸಮೀಪೇ ಗೋದಾಯಾಃ ಪಾಣಿಭ್ಯಾಂ ಲಾಜಹೋಮಕಮ್**
**ಕಾರಯಿತ್ವಾ ರಙ್ಗನಾಥಃ ಬ್ರಾಹ್ಮಣೈಶ್ಚ ಪುರಸ್ಕೃತಃ ॥೧೩೩॥**

ನಂತರ ಅಗ್ನಿಯನ್ನು ಪ್ರತಿಷ್ಠಾಪಿಸಿ ವೈಷ್ಣವರಿಂದ ಹೋಮಾದಿಗಳನ್ನು ಮಾಡಿಸಿದನು. ಅಗ್ನಿಸಮೀಪದಲ್ಲಿ ಕುಳಿತ ಗೋದಾದೇವಿಯ ಪಾಣಿಗಳಿಂದ ಲಾಜ ಹೋಮವನ್ನು ರಂಗೇಶನು ಮಾಡಿಸಿದನು. ಬ್ರಾಹ್ಮಣರಿಂದ ಪುರಸ್ಕೃತನಾದನು.

**ಗೋದಾಂ ನವೋಢಾಂ ಸಂಗೃಹ್ಯ ಭೂಷಿತಾಂ ಭೂಷಣೋತ್ತಮೈಃ**
**ಅಗಾದಗ್ರೇ ಸ್ವಯಂ ಗೋದಾ ಸ್ವಯಂ ಪಶ್ಚಾಚ್ಚಲನ್ ಹರಿಃ ॥೧೩೪॥**
**ಸಪ್ತಪ್ರದಕ್ಷಿಣಂ ಕೃತ್ವಾ ಮುಮೋದ ಸಹ ಭಾರ್ಯಯಾ**

ಭೂಷಣೋತ್ತಮಭೂಷಿತಳಾದ ನವವಧುವಾದ ಗೋದೆಯನ್ನು ಹಿಡಿದು ಕೊಂಡು ರಂಗನಾಥನು ಹಿಂದೆಯೂ ಗೋದೆಯು ಮುಂದೆಯೂ ನಡೆದು ಕೊಂಡು ಅಗ್ನಿಯನ್ನು ಸಪ್ತಪ್ರದಕ್ಷಿಣೆಯನ್ನು ಮಾಡಿ ಭಾರ್ಯೆಯೊಂದಿಗೆ ಹರಿಯು ಸಮ್ಮೋದಿಸಿದನು.

**ವಿಷ್ಣುಚಿತ್ತೋ ಮಹಾಯೋಗೀ ದೈವತೈಸ್ಸಹ ಪೂಜಿತೈಃ ॥೧೩೫॥**
**ಕಾಸಾರಾದ್ಯೈರ್ಯೋಗಿಮುಖ್ಯೈಃ ವಿವಾಹಂ ದ್ರಷ್ಟುಮಾಗತೈಃ**
**ತಮನುಜ್ಞಾಪ್ಯ ಸಂಪೂಜ್ಯ ಭೂಷಣಾದಿಭಿರುಜ್ಜ್ವಲೈಃ ॥೧೩೬॥**
**ರಙ್ಗನಾಥಂ ತನ್ನಿಲಯಂ ಪ್ರೇಷಯಾಮಾಸ ಗೋದಯಾ**

ಮಹಾಯೋಗಿಯಾದ ವಿಷ್ಣುಚಿತ್ತನು ವಿವಾಹವನ್ನು ನೋಡಲು ನೆರೆದಿದ್ದ ದೇವತೆಗಳು ಕಾಸಾರಾದಿ (ಪೊಯ್ಗೈಯಾಳ್ವಾರ್) ಯೋಗಿಮುಖ್ಯರು ಮುಂತಾದವರನ್ನು ಚೆನ್ನಾಗಿ ಪೂಜಿಸಿ ಅವರೊಡನೆ ಕೂಡಿ ರಂಗನಾಥನನ್ನು ಸಂಪೂಜಿಸಿ ಉಜ್ಜ್ವಲಭೂಷಣಗಳಿಂದಲಂಕರಿಸಿ ಗೋದಾದೇವಿಯ ಜತೆಯಲ್ಲಿ ರಂಗನಾಥನನ್ನು ಶ್ರೀರಂಗಕ್ಕೆ ಬೀಳ್ಕೊಟ್ಟನು.

**ಶೇಷತಲ್ಪೇ ಶಯಾನಂ ತಂ ರಙ್ಗೇಶಂ ಸೇವಿತುಂ ತದಾ ॥೧೩೭॥**
**ಇಯೇಷ ಭಕ್ತ್ಯಾ ಸಾ ಗೋದಾ ಸತ್ವರಂ ವರವರ್ಣಿನೀ**

ಶೇಷತಲ್ಪದಲ್ಲಿ ಶಯನಿಸಿರುವ ರಂಗೇಶನನ್ನು ಶೀಘ್ರವಾಗಿ ದರ್ಶನ ಮಾಡಿ ಸೇವಿಸಲು ಭಕ್ತಿಯಿಂದ ವರವರ್ಣಿನಿಯಾದ ಗೋದೆಯು ಅಭಿಲಾಷೆಪಟ್ಟಳು.

**ಸರ್ವೇಷಾಂ ಪಶ್ಯತಾಂ ತಸ್ಮಾತ್ ಗೋದಾ ಚನ್ದನಮಣ್ಡಪಾತ್ ।೧೩೮।**
**ಸುಮುಹೂರ್ತೇ ವಿನಿರ್ಗತ್ಯ ಪ್ರವಿಶ್ಯಾನ್ತಃಪುರಂ ತದಾ**
**ವಿಧಾಯ ಪ್ರಾಞ್ಜಲಿರ್ಭೂತ್ವಾ ತದ್ವಿಮಾನಪ್ರದಕ್ಷಿಣಮ್ ॥೧೩೯॥**

ಎಲ್ಲರೂ ನೋಡುತ್ತಿರುವ ಹಾಗೆಯೇ ಗೋದೆಯು ಚಂದನಮಂಡಪದಿಂದ ಸುಮುಹೂರ್ತದಲ್ಲಿ ಹೊರಗೆ ಬಂದು ಅಂತಃಪುರವನ್ನು ಪ್ರವೇಶಿಸಿ ಪ್ರಾಂಜಲಿ ಬದ್ಧಳಾಗಿ ವಿಮಾನದ ಪ್ರದಕ್ಷಿಣೆಯನ್ನು ಮಾಡಿದಳು.

**ಸಂಪ್ರಾಪ್ಯ ಸಹಸಾ ಭಕ್ತ್ಯಾ ಸನ್ನಿಧಿಂ ರಙ್ಗಶಾಯಿನಃ**
**ಶೇಷತಲ್ಪೇ ಶಯಾನಂ ತಮಪಶ್ಯದ್ರಙ್ಗಶಾಯಿನಮ್ ॥೧೪೦॥**

ಆಮೇಲೆ ತ್ವರೆಯಿಂದ ಭಕ್ತಿಯುತಳಾಗಿ ರಂಗಶಾಯಿಯ ಸನ್ನಿಧಿಗೆ ಬಂದು ಶೇಷತಲ್ಪದಲ್ಲಿ ಶಯನಿಸಿರುವ ರಂಗನಾಥನನ್ನು ನೋಡಿದಳು.

**ಲಾವಣ್ಯಂ ಯತ್ತದೇವಾದ್ಯಂ ರಙ್ಗೇಶಸ್ಯ ಮಹಾದ್ಭುತಮ್**
**ದೃಷ್ಟ್ವಾ ದೃಷ್ಟ್ವಾಽಸಕೃತ್ಸಮ್ಯಗನುಭೂಯಾನುಭೂಯ ಸಾ ॥೧೪೧॥**

ಮೊದಲು ನೋಡಿದ ಅದೇ ಲಾವಣ್ಯವಾದ ಆ ರಂಗೇಶನ ಮಹಾದ್ಭುತವಾದ ಲಾವಣ್ಯವನ್ನು ನೋಡಿ ನೋಡಿ ಮತ್ತೆ ಮತ್ತೆ ಕಂಡು ಆನಂದವನ್ನು ಮತ್ತೆ ಮತ್ತೆ ಅನುಭವಿಸಿದಳು.

**ಶೇಷತಲ್ಪಂ ಸಮಾರುಹ್ಯ ತತ್ಪಾದಾಬ್ಜಸಮೀಪಗಾ**
**ನಾದೃಶ್ಯತ ತದಾ ದೇವೀ ಸರ್ವೇಷಾಂ ಪಶ್ಯತಾಂ ಸತಾಮ್ ॥೧೪೨॥**
**ತಂ ದೃಷ್ಟ್ವಾಶ್ಚರ್ಯಮತುಲಂ ವಿಸ್ಮಯಂ ಪರಮಂ ಯಯುಃ**

ಶೇಷತಲ್ಪವನ್ನು ಆರೋಹಿಸಿ ಅವನ ಪಾದಾಬ್ಜಸಮೀಪಕ್ಕೆ ನಡೆದು, ಎಲ್ಲರೂ ನೋಡುತ್ತಿರುವ ಹಾಗೆಯೇ ಆ ದೇವಿಯು ಅದೃಶ್ಯಳಾಗಿಬಿಟ್ಟಳು. ಆ ಅತುಲವಾದ ಆಶ್ಚರ್ಯವನ್ನು ನೋಡಿ ಎಲ್ಲರೂ ಪರಮವಿಸ್ಮಿತರಾದರು.

**ವಿಷ್ಣುಚಿತ್ತೋ ವಲ್ಲಭಶ್ಚ ತೇ ಸರ್ವೇ ಪುರವಾಸಿನಃ ॥೧೪೩॥**
**ಶ್ರೀಭೂಮಿನೀಲಾಗೋದಾಭಿಃ ಸ ತತ್ರ ರಮಿತಸ್ತದಾ**
**ಶಯಾನೋ ಭೋಗಿಶಯನೇ ತಸ್ಥೌ ಮುಕ್ತಿಪ್ರದೋ ನೃಣಾಮ್ ॥೧೪೪॥**

ವಿಷ್ಣುಚಿತ್ತನೂ ವಲ್ಲಭದೇವನೂ ಮುಂತಾದ ಆ ಪುರವಾಸಿಗಳೆಲ್ಲರೂ ವಿಸ್ಮಿತರಾದರು. ಆಗ ಶ್ರೀ ಭೂಮಿ ಮತ್ತು ನೀಲಾದೇವಿಯರಿಂದಲೂ ಗೋದಾ ದೇವಿಯಿಂದಲೂ ಶ್ರೀರಂಗೇಶನು ರಮಿಸಲ್ಪಟ್ಟು ಭೋಗಿಶಯನದಲ್ಲಿ ಪವಡಿಸಿ ಕೊಂಡು ಮುಕ್ತಿಪ್ರದನಾಗಿ ವಿರಾಜಿಸಿದನು.

**ಅಙ್ಗೀಕೃತ್ಯಾಥ ತಾಂ ದೇವೀಂ ಭಗವಾನ್ ರಙ್ಗರಾಟ್ ತದಾ**
**ವಿಷ್ಣುಚಿತ್ತಂ ಸಮಾಹೂಯ ಸರ್ವೇಷಾಂ ಶೃಣ್ವತಾಂ ತದಾ ॥೧೪೫॥**
**ಇತ್ಯುವಾಚ ಪ್ರವಾಳೋಷ್ಠಸ್ಫುರದ್ದಶನಸುಪ್ರಭಃ**

ನಂತರ ಆ ದೇವಿಯನ್ನು ರಂಗರಾಜನು ಅಂಗೀಕರಿಸಿ, ಎಲ್ಲರೂ ಕೇಳುತ್ತಿರುವಂತೆ ಶ್ರೀವಿಷ್ಣುಚಿತ್ತರನ್ನು ಸಮೀಪಕ್ಕೆ ಕರೆದು ಹವಳದಂತಹ ತುಟಿಗಳ ಮಧ್ಯದಲ್ಲಿ ಹೊಳೆಯುವ ದಂತಪಂಕ್ತಿಯ ಪ್ರಭೆಯೊಂದಿಗೆ ಇಂತೆಂದನು.

**ಸಮುದ್ರರಾಜವನ್ಮೇದ್ಯ ಶ್ವಶುರೋಽಭೂದ್ ಭವಾನ್ ಕಿಲ ॥೧೪೬॥**
**ತೀರ್ಥಂ ಪ್ರಸಾದಂ ಮಾಲಾಂ ಚ ಶಠಕೋಪಂ ಚ ಸಾದರಮ್**
**ದಾಪಯಿತ್ವಾರ್ಚಕೈಸ್ಸಮ್ಯಕ್ ಶ್ವಶುರಾಯ ಸ ರಙ್ಗರಾಟ್ ॥೧೪೭॥**
**ದ್ವಿಪಟಂ ಹಾಟಕಮಯಮಾಚ್ಛಾದ್ಯಾತ್ಯನ್ತಸಂಭ್ರಮಾತ್**

ಸಮುದ್ರರಾಜನಂತೆ, ಈವತ್ತು ನೀವೂ ನನಗೆ ಶ್ವಶುರರಾಗಿಬಿಟ್ಟಿರಿ ಎಂದು ಹೇಳಿ, ತೀರ್ಥಪ್ರಸಾದ ಮಾಲೆ ಮರ್ಯಾದೆ ಶಠಕೋಪ ಪರಿವಟ್ಟ ಎಲ್ಲವನ್ನೂ ಅರ್ಚಕ ಮುಖೇನ ಸಾದರವಾಗಿ ಅವರಿಗೆ ಕೊಡಿಸಿ ಅವರಿಗೆ ಎರಡು ಪೊನ್ನಾಡೆಗಳನ್ನು (ಹೊನ್ನಹೊದಿಕೆ) ಹೊದೆಯಿಸಿ ಅತಿಸಂಭ್ರಮದಿಂದ ಗೌರವಿಸಿದನು.

**ವಟಪತ್ರಶಯಾನಾಯ ಪೂರ್ವವದ್ಧನ್ವಿಮಙ್ಗಳೇ ॥೧೪೮॥**
**ಶ್ರೀಪುಷ್ಪತುಲಸೀಮಾಲಾಕೈಂಕರ್ಯಂ ಪ್ರತಿವಾಸರಮ್**
**ಕುರ್ವಂಸ್ತತ್ರೈವ ಭಟ್ಟಾರ್ಯ ಸುಖಮಾಸ್ಸ್ವ ನಿರನ್ತರಮ್ ॥೧೪೯॥**
**ಇತ್ಯುಕ್ತ್ವಾ ಭಟ್ಟನಾಥಾರ್ಯಂ ತದಾ ಪ್ರಾಸ್ಥಾಪಯದ್ಧರಿಃ**

ಶ್ರೀವಟಪತ್ರಶಾಯಿಯಾದ ದೇವರಿಗೆ, ನೀವು ಪೂರ್ವದಂತೆ , ನಿತ್ಯವೂ ತಪ್ಪದೆ ಪುಷ್ಪಮಾಲಾ ತುಳಸೀಮಾಲಾ ಕೈಂಕರ್ಯಗಳನ್ನು ಮಾಡಿಕೊಂಡು ಸುಖವಾಗಿ ಇರಿ ಎಂದು ಭಟ್ಟಾರ್ಯರಿಗೆ ಅರುಹಿ ಅವರನ್ನು ಕಳುಹಿಸಿಕೊಟ್ಟನು.

**ಕೃತ್ವಾ ವಿವಾಹಂ ಭಟ್ಟಾರ್ಯೋ ಗೋದಾಂ ಸಂಸ್ಥಾಪ್ಯ ತಾಂ ಹರೌ ॥೧೫೦॥**
**ವಿಷಾದಪ್ರೀತಿಯುಕ್ತಾತ್ಮಾ ತೇನ ಸಂಪ್ರೇಷಿತಸ್ತದಾ**
**ರಾಜ್ಞಾ ವಲ್ಲಭದೇವೇನ ಚತುರಙ್ಗಬಲೈಸ್ಸಹ ॥೧೫೧॥**
**ಧನ್ವಿನವ್ಯಪುರಂ ಪ್ರಾಪ್ಯ ಪೂರ್ವವತ್ಸುಖಮಾಸ್ಥಿತ:**

ಹೀಗೆ ಭಟ್ಟನಾಥರು ಮಗಳ ವಿವಾಹವಂ ನೆರವೇರಿಸಿ, ಗೋದೆಯನ್ನು ಹರಿಯಲ್ಲಿ ಸಂಸ್ಥಾಪಿಸಿ, ಅತ್ಯಂತ ವಿಷಾದ ಮತ್ತು ಪ್ರೀತಿಭಾವ ಯುಕ್ತರಾಗಿ ಹರಿಯಿಂದ ಬೀಳ್ಕೊಡಲ್ಪಟ್ಟು, ರಾಜಾ ವಲ್ಲಭದೇವ ನೊಂದಿಗೂ ಚತುರಂಗಬಲದೊಂದಿಗೂ ಶ್ರೀವಿಲ್ಲಿಪುತ್ತೂರಿಗೆ ಹಿಂತಿರುಗಿ ಸೇರಿ ಮೊದಲಿನಂತೆ ಸುಖವಾಗಿ ಇರತೊಡಗಿದರು.

**ತತೋ ವಲ್ಲಭರಾಜೋಽಪಿ ಭಟ್ಟಾರ್ಯಂ**
**ದೇಶಿಕೋತ್ತಮಮ್ ॥೧೫೨॥**
**ತಂ ಧನ್ವಿಮಙ್ಗಲೇ ಸಮ್ಯಕ್ ಪ್ರತಿಷ್ಠಾಪ್ಯ ಮಹೌಜಸಮ್**
**ತೇನಾನುಜ್ಞಾಪಿತೋ ಧೀಮಾನ್ ಪ್ರಯಯೌ**
**ಮಧುರಾಂ ಪುರೀಮ್ ॥೧೫೩॥**

ಆಗ ವಲ್ಲಭದೇವರಾಜನೂ ಆಚಾರ್ಯೋತ್ತಮರಾದ ಭಟ್ಟನಾಥರನ್ನು ಶ್ರೀವಿಲ್ಲಿಪುತ್ತೂರಿನಲ್ಲಿ ಪ್ರತಿಷ್ಠಾಪಿಸಿ ಅವರಿಂದ ಅನುಮತಿಸಲ್ಪಟ್ಟು, ಮಧುರಾಪುರಿಗೆ ಚತುರಂಗಬಲದೊಂದಿಗೆ ತೆರಳಿದನು.

**ವಿಷ್ಣುಚಿತ್ತೋ ಮಹಾಭಾಗ: ಶ್ವಶುರೋ ರಙ್ಗಭೂಪತೇ:**
**ತತ್ಕೈಙ್ಕರ್ಯಂ ಸದಾ ಕುರ್ವಂಸ್ತಸ್ಥೌ ದಾಸ್ಯೈಕಜೀವನ:॥೧೫೪॥**

ಶ್ರೀವಿಷ್ಣುಚಿತ್ತರಾದ ಮಹಾಭಾಗರು ರಂಗಭೂಪತಿಯ ಶ್ವಶುರರಾಗಿ, ವಟಪತ್ರಶಾಯಿಯಾದ ಭಗವಂತನ ಕೈಂಕರ್ಯವನ್ನು ಪೂರ್ವದಂತೆ ನಿರಂತರವಾಗಿ ಮಾಡುತ್ತ ದಾಸ್ಯವೇ ಜೀವನವೆಂಬಂತೆ ಕಾಲಕ್ಷೇಪ ಮಾಡುತ್ತಲಿದ್ದರು.

**ವಟಪತ್ರಶಯಾನಾಯ ಪೂರ್ವವದ್ಧನ್ವಿಮಙ್ಗಲೇ**
**ಗೋದಾರಙ್ಗೇಶಕಲ್ಯಾಣಂ ಯೇ ಕುರ್ವನ್ತಿ ಸ್ವವೇಶ್ಮನಿ ॥೧೫೫॥**

ಯಾರು ಈ ಗೋದಾರಂಗೇಶ ವಿವಾಹಮಂಗಳವನ್ನು ಸ್ವಗೃಹಗಳಲ್ಲಿ ನಡೆಸುವರೋ, ಅವರಿಗೆ ನಿರಂತರವಾಗಿ ನಿತ್ಯಕಲ್ಯಾಣವು ಸತ್ಯವಾಗಿ ಆಗುವುದು.

**ತೇಷಾಂ ಚ ನಿತ್ಯಕಲ್ಯಾಣಂ ಭವಿಷ್ಯತ್ಯನಿಶಂ ಧ್ರುವಮ್**
**ಕಲ್ಯಾಣಂ ಯೇ ಪ್ರಕುರ್ವನ್ತಿ ಗೋದಾಕಲ್ಯಾಣವಾಸರೇ ॥೧೫೬॥**

ಗೊದಾಕಲ್ಯಾಣ ದಿನದಲ್ಲಿ ಯಾರು ಗೋದಾ ವಿವಾಹವನ್ನು ನಡೆಸುವರೋ ಅವರೆಲ್ಲರೂ ಯಾವಾಗಲೂ ಸರ್ವಕಲ್ಯಾಣಯುಕ್ತರಾಗಿರುತ್ತಾರೆ.

**ಕಲ್ಯಾಣಸಹಿತಾಸ್ಸರ್ವೇ ಭವೇಯುಸ್ಸರ್ವದಾ ನರಾ:**
**ಶ್ರೀಭೋಗಿದಿವಸೇ ಯೇ ತು ಗೋದಾರಙ್ಗೇಶಯೋಸ್ತದಾ ॥೧೫೭॥**
**ಸಮ್ಯಗ್ವಿವಾಹಂ ಕುರ್ವನ್ತಿ ಸಮ್ಪನ್ನಾಸ್ತೇऽನಿಶಂ ಭುವಿ**

ಶ್ರೀಭೋಗಿ ದಿವಸದಲ್ಲಿ ಯಾರು ಗೋದಾರಂಗೇಶರ ಕಲ್ಯಾಣಮಹೋತ್ಸವವನ್ನು ಅನುಷ್ಠಾನ ಮಾಡುವರೋ ಅವರು ನಿತ್ಯವೂ ಸಂಪನ್ನರಾಗಿರುತ್ತಾರೆ.

**ವಿಷ್ಣ್ವಾಲಯೇ ಗೃಹೇ ವಾಪಿ ಗೋದಾಕಲ್ಯಾಣಮುತ್ತಮಮ್ ।೧೫೮।**
**ಯೇ ಸೇವನ್ತೇ ಮಹಾತ್ಮಾನ: ಶ್ರೀಮನ್ತಸ್ತೇ ಸದಾ ಭುವಿ**

ವಿಷ್ಣುಮಂದಿರದಲ್ಲಿಯಾಗಲೀ ಗೃಹದಲ್ಲಿಯಾಗಲೀ ಯಾರು ಈ ಉತ್ತಮವಾದ ಗೋದಾಕಲ್ಯಾಣವನ್ನು ಆಚರಿಸುವರೋ ಯಾರು ಸೇವಿಸುತ್ತಾರೋ ಅವರು ಭೂಲೋಕದಲ್ಲಿ ಸದಾ ಶ್ರೀಮಂತರಾಗುತ್ತಾರೆ.

**ದೇಹಾನ್ತೇ ಚ ತಥಾ ವಿಷ್ಣೋ: ಸಾಯುಜ್ಯಂ ಪ್ರಾಪ್ನುವನ್ತಿ ಹಿ ॥೧೫೯॥**

ದೇಹದ ಅವಸಾನದಲ್ಲಿಯೂ ವಿಷ್ಣುವಿನ ಸಾಯುಜ್ಯವನ್ನು ಖಂಡಿತವಾಗಿ ಹೊಂದುತ್ತಾರೆ.

**ಗೋದಾಚರಿತ್ರಂ ಸುಮಹದ್ವಿಚಿತ್ರಂಸಮಸ್ತಸನ್ಮಙ್ಗಲಪೂರ್ಣಪಾತ್ರಮ್**
**ಶೃಣ್ವನ್ತಿ ಯೇ ಭಕ್ತಿಯುತಾ: ಪಠನ್ತಿ ಸನ್ಮಙ್ಗಲಾಸ್ತೇ**
**ಸತತಂ ಭವೇಯು: ॥೧೬೦॥**

ಈ ಗೋದಾಚರಿತ್ರವು ಮಹಾವಿಚಿತ್ರವೂ ಆಶ್ಚರ್ಯಕರವೂ ಸಮಸ್ತ ಸನ್ಮಂಗಳಗಳನ್ನು ಪ್ರದಾನ ಮಾಡುವಂತಹದೂ ಆಗಿದೆ. ಇದನ್ನು ಯಾರು ಭಕ್ತಿಶ್ರದ್ಧೆಯೊಂದಿಗೆ ಪಠಣ ಮಾಡುವರೋ, ಶ್ರವಣ ಮಾಡುವರೋ ಅವರು ಯಾವಾಗಲೂ ಸಮಸ್ತ ಸನ್ಮಂಗಳಗಳನ್ನು ಹೊಂದುತ್ತಾರೆ.

**ಇತಿ ಶುಭಂ ಶುಭಂ ಶುಭಂ.**

**ಸ್ವೋಚ್ಛಿಷ್ಟಮಾಲಿಕಾಬನ್ಧಗನ್ಧ ಬನ್ಧುರಜಿಷ್ಣವೇ**
**ವಿಷ್ಣುಚಿತ್ತತನೂಜಾಯ್ಕೈ ಗೋದಾಯ್ಕೈ ನಿತ್ಯಮಙ್ಗಳಮ್ ॥೧೬೧॥**

ಯಾರು ಮುಡಿದುಕೊಟ್ಟ ಪುಷ್ಪಮಾಲಿಕೆಯನ್ನು ಆಶೆಯಿಂದ ಧರಿಸಿಕೊಂಡ ವಿಷ್ಣುವು ಸುಂದರನಾಗಿ ಕಾಣುವನೋ, ಆ ವಿಷ್ಣುಚಿತ್ತನ ಮಗಳಾದ ಗೋದಾದೇವಿಗೆ ನಿತ್ಯಮಂಗಳವಾಗಲಿ.

—o—

# श्रीगोदाकल्याणम्

श्रीमते रामानुजाय नमः
श्रीगोदाकल्याणम्

श्रीशैलेशदयापात्रं धीभक्त्यादिगुणार्णवम्
यतीन्द्रप्रवणं वन्दे रम्यजामातरं मुनिम् ॥१॥

देवस्य महिषीं दिव्यामादौ गोदामुपास्महे
यन्मौलिमालिकां प्रीत्या स्वीकरोति स्वयं प्रभुः ॥२॥

शुचिमासि पांड्यभुवि पूर्वफल्गुनी
घनभे नवीनतुळसीवनान्तरात्
उदितामुदारगुणरङ्गनायक
प्रियवल्लभां वसुमतीमुपास्महे ॥३॥

नीळातुङ्गस्तनगिरितटी सुप्तमुद्बोध्य कृष्णं
पारार्थ्यं स्वं श्रुतिशतशिरस्सिद्धमध्यापयन्ती
स्वोच्छिष्टायां स्रजि निगळितं या बलात्कृत्य भुङ्क्ते
गोदा तस्यै नम इदमिदं भूय एवास्तु भूयः ॥४॥

वैकुण्ठे तु परे लोके भगवान् परमः पुमान्
आस्ते लक्ष्म्या च भूम्या च भक्तैर्भागवतैस्सह ॥५॥

अस्येशाना हि जगतो विष्णुपत्नी सनातनी
सा कदाचिज्जगन्माता सदया विष्णुवल्लभा ॥६॥

अपारभववाराशिनिमग्नान् भृशदु:खितान्
बद्धान् विलोक्य दु:खेन भर्तारमिदमब्रवीत् ॥७॥

यदि दत्ता त्वयानुज्ञा लोकसंरक्षणे मम
लीलायामवतीर्याहं नित्यैस्सिद्धैस्सहेश्वर
त्वदंघ्रिपद्माभिमुखान् करिष्ये त्वत्प्रसादत:
बद्धजीवानिमान् सर्वान् त्वदाज्ञापरिपालिनी ॥८॥

वाक्यं निशम्य निपुणं हरिरिन्दिराया:
सञ्चिन्त्य तत्र समये घटसंभवाय ॥९॥
दत्तं वरं हृदि निधाय जगज्जनन्यै
लोकावनाय महतीं प्रददावनुज्ञाम् ॥१०॥

वनमालां वैजयन्तीं तथा पञ्चायुधानि च
श्रीवत्सं कौस्तुभं चैव सेनेशविहगेश्वरौ ॥११॥
अनन्तप्रमुखान् सर्वान् समादायाज्ञया हरे:
लोकसंरक्षणार्थाय लक्ष्मीर्भूम्यां मनो दधौ ॥१२॥
अथ मे कर्षत: क्षेत्रं लांगलादुत्थिता मया
क्षेत्रं शोधयता लब्धा नाम्ना सीतेति विश्रुता ॥१३॥

भूतलादुत्थिता सा तु व्यवर्धत ममात्मजा
एवं जनकराजेन सीताया जन्म भाषितम् ॥१४॥
तथैव गोदा तुलसीवनभूमौ तथाजनि
तस्मिन् खनित्रवक्रेण विष्णुचित्ते महात्मनि ॥१५॥

तुलसीवृक्षमूलस्य खननं च प्रकुर्वति
तां दृष्ट्वा विस्मयाद्बालां विष्णुचित्तः प्रहर्षितः ॥१६॥

आदाय गृहमागम्य गोदां कृत्वा स्वपुत्रिकाम्
गोदेति नामकरणं चकार दुहितुस्तदा ॥१७॥

सिद्धानां शरदां कलावपगमे वर्षे नळाख्ये रवौ
याते कर्कटकं विधावुपचिते षष्ठेऽहनि श्रीमति
नक्षत्रेऽर्यमदैवते क्षितिभुवो वारे चतुर्थ्यां तिथौ
गोदा प्रादुरभूदचिंत्यमहिमा श्रीविष्णुचित्तात्मजा ॥१८॥

लालिता पोषिता नित्यं पितृभ्यां प्रेमपूर्वकम्
ववृधे बालिका गोदा पित्रोरानन्ददायिनी ॥१९॥
बाल्यात्प्रभृति सुस्निग्धा सदाचारसमाश्रया
वैराग्यज्ञानभक्तीनां सीमाभूमिर्बभूव सा ॥२०॥

अलंकारप्रिया बाला तस्य ताः पुष्पमालिकाः
जनकाज्ञातवृत्तान्ता सा धम्मिल्ले दधौ रहः ॥२१॥

कदाचिद्विष्णुचित्तोऽथ गोदायास्तद्विचेष्टितम्
विलोक्य भीतोऽप्यकृतकोपो दुहितृवत्सलः ॥२२॥

तास्ततो विष्णवे तत्र नार्पयामास मालिकाः
स्वप्ने प्रसन्नो भगवान् भट्टनाथं वचोऽब्रवीत् ॥२३॥

गोदयैव धृता मालास्सुगन्धा मे ह्यतिप्रिया:
धृतपूर्वास्तयैवैता मालिकास्समर्पय ॥२४॥

आमुक्तमाल्यदा नाम तस्यास्तेनाभवद्भुवि
ज्ञानभक्त्यादयस्तस्या गुणा ववृधिरेऽधिकम् ॥२५॥

पतिसंयोगसुलभं गोदाया यद्वयःशुभम्
दृष्ट्वा तदा विष्णुचित्तः चिन्तामाप दुरत्ययाम् ॥२६॥

तं व्याकुलान्तःकरणं विलोक्य पितरं तदा
व्याजहार शुभं वाक्यं गोदादेवी हरिप्रिया ॥२७॥
भगवन्तं विना नान्यं वृणेऽभीष्टं पितस्सती
मा शोकं कुरु धर्मज्ञ मदर्थं रक्षको हरिः ॥२८॥

तच्छ्रुत्वा वचनं तस्यास्सन्तुष्टो विष्णुचित्तकः
गोदां विलोक्यार्द्रदृशा व्याजहार शुभं वचः ॥२९॥

अष्टोत्तरशतं धाम्नामस्त्यर्चारूपिणो हरेः
भुवि यद्वैभवं श्रुत्वा पुंसां मुक्तिः करे स्थिता ॥३०॥

विष्णुनामपदान्येवं विष्णुचित्ते विवृण्वति
मधुराधीशकृष्णस्य वृत्तं श्रुत्वातिहर्षिता ॥३१॥

ततस्सुन्दरराजस्य चरितं शृण्वती मुदा
उदारपुलकांकूरमुवाह सुतनुस्तनौ ॥३२॥

वेंकटाद्रिपतेर्विष्णोः कथाकर्णनकर्मणा
रमणीये मुखे तस्याः विकासोऽभूद्विजृंभितः ॥३३॥

श्रीमतो रङ्गराजस्य शृण्वती महिमोदयं
आधत्तामन्दमानन्दमरविन्ददलेक्षणा ॥३४॥

एवं निशम्य सर्वेषां हरीणां वैभवं तदा
भट्टनाथमुखात्सर्वं गोदानन्दमवाप सा ॥३५॥

अष्टोत्तरशतस्थानस्थितार्चारूपिणस्तदा
ता विष्णुमूर्तयस्सर्वा भट्टनाथेन संस्तुताः ॥३६॥

गोदास्वयंवरे शीघ्रं गोदोद्वाहाभिकांक्षिणः
स्वकीयदिव्यलावण्ययौवनाद्यभिसंयुताः ॥३७॥

श्रीरङ्गेशादयो देवा धन्विमङ्गलमागताः
रङ्गेशादींस्ततस्सर्वान् गोदादेवी विलोक्य तान् ॥३८॥

तन्मध्ये सुमहात्मानं तं विलोक्य महौजसम्
रङ्गेशं सुन्दरवरं वरयामास सुन्दरी ॥३९॥

भट्टनाथेन हरयः तेन संपूजितास्ततः
संप्रेषिताश्च ते सर्वे स्वं स्वं स्थानं प्रपेदिरे ॥४०॥

स्वलावण्यादिमहिमासम्पद्भिस्सादरं मुहुः
गोदां सम्मोहयित्वाशु रङ्गेशो रङ्गमभ्यगात् ॥४१॥

गोदा रङ्गेश्वरं देवं मत्वा स्वाभिमतं वरम्
ध्यायन्ती सततं तस्थौ तमेवानन्यमानसा ॥४२॥

रङ्गेशागमनाभावात्सा गोदा विरहातुरा
गोपिका कृष्णविरहाद्यथातप्यन्त भूरिशः ॥४३॥

रङ्गेशलग्नहृदया ह्यतप्यत दिवानिशम्
जितनिद्रा जिताहारा राधिकेव समास्थिता ॥४४॥

पिता दुहितरं वीक्ष्य विष्णुचित्तो ऽ प्यतप्यत
रङ्गेशो भगवान्देवो गोदायास्सदृशः पतिः ॥४५॥

कथं महदिदं कार्यं तस्यास्तद् घटतेऽधुना
ब्रह्मेशसनकादीनां योगिनामप्यगोचरः ॥४६॥

वेदान्तवेद्यो भगवानयं नारायणः परः.
अनन्तकोटिब्रह्माण्डनायकश्च श्रियःपतिः ॥४७॥

क्षुद्रो दरिद्रो दुर्मानीत्वहं त्वारामकारकः
क्वासावत्यन्तपापिष्ठः क्वच श्रीरङ्गनायकः ॥४८॥

वरं समीचीनतरमकामयत मे सुता
तयोर्वैवाहिकं कार्यं श्रीरङ्गेश्वरगोदयोः ॥४९॥

केनोपायेन तत्साध्यमितिचिन्तापरोऽभवत्
प्रव्याकुलान्तःकरणो भट्टनाथस्तदानघः ॥५०॥

तमेव शरणं गत्वा सुष्वापाकृतभोजनः
स्वप्ने प्रसन्नो भगवान् भट्टनाथस्य रङ्गराट् ॥५१॥

स त्वं श्वशुर सर्वज्ञ ! किमर्थं परितप्यसे
तूर्णं दुहितरं गोदां समादायार्य सांप्रतम् ॥५२॥

मम रङ्गं समायाहि महता वैभवेन च
सर्वेषां पश्यतां शीघ्रं गोदाया दुहितुस्तव ॥५३॥

करिष्याम्यहमेवाद्य पाणिग्रहणमङ्गळम्
ततस्स्वप्नात्समुत्थाय भट्टनाथस्सविस्मयः ॥५४॥

दुहित्रे स्वप्नवृत्तान्तं सर्वं सम्यङ्निवेद्य तम्
सन्तुष्टो निर्भरस्तस्थौ तां सुतां लालयंस्तदा ॥५५॥

अतिप्रियतमं सत्यं तन्निशम्य पितुर्वचः
अकरोद् भगवत्प्रीत्यै धनुर्मासव्रतोत्तमम् ॥५६॥

सा लोकरक्षणार्थाय गोदादेवी यतव्रता
हेमन्ते प्रथमे मासि नन्दव्रजकुमारिकाः ॥५७॥

चेरुर्हविष्यं भुञ्जानाः कात्यायन्यर्चनव्रतम्
इति चैवं यथा चक्रुः प्रपन्ना गोपिकास्त्रियः ॥५८॥

धनुर्मासव्रतं गोदा तथैव भगवत्परा
स्ववेश्मनि प्रतिष्ठाप्य तं सुन्दरवरं हरिम् ॥५९॥

रङ्गेशं पूजयामास विधिना नियतव्रता
ब्राह्मे मुहूर्ते चोत्थाय रङ्गरङ्गेति भाषिणी ॥६०॥

स्नात्वा शुक्लाम्बरधरा ह्यूर्ध्वपुण्ड्रधरा शुभा
पीतांबरेण रङ्गेशं समलंकृत्य भूषणैः ॥६१॥

गंधैः पुष्पैश्च धूपैश्च दीपैर्नीराजनैस्तथा
सम्यक्संपूज्य विधिवद् गोदा हरिपरायणा ॥६२॥

मुद्गान्नं शर्कराज्यादि संप्लुतं फलसंयुतम्
नैवेद्यं विष्णवे सम्यक्समर्प्यात्यन्तभक्तितः ॥६३॥

दत्वा कर्पूरताम्बूलं नीराजनमनुत्तमम्
गाथां मनोहरामेकां कृत्वा द्राविडभाषया ॥६४॥

तां समर्प्य च पूजान्ते पुनर्नीराजनं ददौ
ततः प्रदक्षिणं कृत्वा रङ्गेशं प्रणिपत्य तम् ॥६५॥

कृताञ्जलिपुटा भक्त्या प्रार्थयामास निश्चला
रंगेश करुणासिन्धो मत्पाणिग्रहणं कुरु ॥६६॥

त्वां विनान्यं न जानामि सत्यं वच्मि नमोऽस्तुते
एवं सम्प्रार्थ्य सा नित्यं स्वमनोभीष्टमुत्तमम् ॥६७॥

तदीयाराधनं चक्रे भगवत्प्रीतयेऽनिशम्
भुक्त्वैकवारं नैवेद्यं हविष्यं नियतव्रता ॥६८॥

दृढभक्तियुता गोदा भूशया ब्रह्मचारिणी
रंगेशलग्नहृदया राधिकेव समास्थिता ॥६९॥

मासमेकं चरित्वैवमेतद्व्रतमनुत्तमं
सा सम्यगनुभूयार्थं श्रीमद्भागवतस्थितम् ॥७०॥

प्रबन्धद्वितयं चक्रे सर्वलोकामृतप्रदम्
दिव्यप्रबन्धस्तत्रैको लक्ष्मीव्रताभिधो महान् ॥७१॥

धनुर्मासोत्सवपरः त्रिंशद् गाथाविराजितः
गोदास्तवाभिधस्तत्र द्वितीयः परिकीर्तितः ॥७२॥

त्रिचत्वारिंशदधिकं गाथानां शतमत्र हि
संस्तुतानि तयाष्टौ च विष्णुस्थानानि भूतले ॥७३॥

रङ्गं कृष्णपुरं च धन्विनगरं पाण्ड्यवनाद्रिर्महान्
क्षीराब्धिर्वृषभूधरश्च मधुरा नन्दव्रजश्चोत्तरे
अष्टौ ते समभिष्टुता भगवतः श्रीगोदया भक्तितः
तानेवं प्रतिवासरं पठति यः श्रीमान्स भूयान्नरः ॥७४॥

त्रिंशद् गाथायुतं दिव्यं प्रबंधं विदधे तदा
तत्समाप्तिदिने रंगनायकस्सहसा तदा ॥७५॥

स्वप्ने प्रसन्नो भगवान् गोदादेव्याः श्रियःपतिः
व्याजहार शुभं वाक्यं मन्दस्मितमुखस्स ताम् ॥७६॥

परितुष्टोऽस्मि भद्रं ते स्तोत्रेणानेन बालिके
अर्चनेन विशेषेण धनुर्मासि कृतेन च ॥७७॥

त्वत्पाणिग्रहणं शीघ्रं करिष्यामि न संशयः
इत्युक्त्वा सर्वभोगांश्च गोदायै प्रददौ हरिः ॥७८॥

तन्मासान्तदिने गोदा सर्वभोगसमन्विता
रंगेशेनाखिलान् भोगान् बुभुजे हरिणा सह ॥७९॥
भोगीति नाम तस्यासीत् दिवसस्य तदानघ
यस्मिन्दिने सर्वभोगान् श्रीगोदा बुभुजे ततः ॥८०॥

भूम्यास्तले शायिनी सा निराहारा यतव्रता
धनुर्मासे सुसंपूज्य रंगेशं राधिका यथा ॥८१॥

तदेकहृदया तस्थौ श्रीकृष्णविरहातुरा
तया संपूजितस्सम्यक् गोदया रङ्गराट् तदा ॥८२॥

धनुर्मासेऽन्त्यदिवसे प्रत्यक्षमगमद्धरिः
गोदाविवाहदिवसं तमित्याहुर्मनीषिणः ॥८३॥

विधाय मङ्गलस्नानं बन्धुभिस्सह सादरम्
उत्सवं कारयेत्तत्र सर्वभोगसमृद्धये ॥८४॥

ततस्स्वप्नात्समुत्थाय गोदा सन्तुष्टमानसा
पित्रे निवेद्य तत्सर्वं निश्चला सुखमास्थिता ॥८५॥

ततो रंगेश्वरः श्रीमान् स्वश्रीरंगाधिकारिणः
इत्युवाच प्रवालोष्ठस्फुरद्दशनसुप्रभः ॥८६॥

मदीयैर्मङ्गळैर्वाद्यैः सकलैः छन्नचामरैः
नवरत्नमयीं दिव्यां मदीयां शिबिकां पराम् ॥८७॥

आदाय धन्विनगरं सम्प्राप्यात्यन्तवैभवैः
विष्णुचित्तसुतां गोदामानयध्वं ममान्तिकम् ॥८८॥

अङ्गीकृत्याञ्जसा सर्वे रंगेशाज्ञां त्वरान्विताः
धन्विनव्यपुरं जग्मुः गोदानयनकारणात् ॥८९॥

विष्णुचित्ताय तत्सर्वं तस्मै सम्यगबोधयन्
तेषां तद्वचनं श्रुत्वा महत्कर्णामृतं च सः ॥९०॥

विस्मितस्संप्रहृष्टोऽथ तान्सर्वान्समपूजयत्
श्रीधन्विनव्यपुरनाथाय तत्सर्वं विष्णवेऽखिलम् ॥९१॥

विज्ञाप्य सादरं भक्त्या तेनानुज्ञापितस्तदा
ततः श्रीरङ्गगमने चकार मतिमान्मतिम् ॥९२॥

वल्लभाय स्वशिष्याय गोदोद्वाहं च शंसितुम्
भूपाय प्राहिणोत् शिष्यान् भट्टेशो मधुरां पुरीम् ॥९३॥

प्रगृह्य शिरसा राजा गुरोराज्ञामलंघिताम्
धन्विनव्यपुरं प्राप चतुरंगबलान्वितः ॥९४॥

अनन्या राघवेणाहं भास्करेण प्रभा यथा
गोदादेवी तथैवासीत् पातिव्रत्यपरायणा ॥९५॥

सर्वलोकेश्वरस्यैवं रङ्गेशस्य प्रिया सती
नोचितं दृष्टिपतनं तदन्यपुरुषस्य हि ॥९६॥

इत्येवं सम्यगालोच्य भट्टनाथो महामतिः
शिबिकां तां समारोप्य गोदां दुहितरं तदा ॥९७॥

पीताम्बरेण संच्छाद्य सुदृढं शिबिकां बहिः
महता वैभवेनैव रङ्गेशच्छत्रचामरैः ॥९८॥

राज्ञा वल्लभदेवेन तत्रत्यैर्निखिलैर्जनैः
भेरीमृदङ्गनादैश्च जयशब्दैश्च वन्दिनाम् ॥९९॥

प्रतस्थे सहसा धीमान् श्रीरङ्गं प्रति सादरम्
धन्विमङ्गलमारभ्य चाश्रीरङ्गं समन्ततः ॥१००॥

सुपुष्पकायमानैश्च निवासस्थानमण्डपैः
तन्मार्गं सहसा सम्यगलंकारं प्रचक्रिरे ॥१०१॥

वैकुंठमार्गवद्रङ्गमार्गस्तेनाभवत्तदा
अयं रङ्गेश्वरो देवो विष्णुचित्तसुतामिमाम् ॥१०२॥

कथं करोति मनुजां पाणिग्रहणमद्भुतम्
इति तद् द्रष्टुकामास्ते विस्मयाविष्टमानसाः ॥१०३॥

श्रीरंगं निखिला जग्मुः चोलपांड्यादिमानवाः
श्रीरङ्गनगरं सर्वैर्जनैरापूरितं बभौ
नित्यमुक्तसमाकीर्णं वैकुंठनगरं यथा ॥१०४॥

रंगेशपाणिग्रहणत्वरया श्रीहरिप्रिया
कृताञ्जलिपुटा भक्त्या चिन्तयन्ती तमेव सा ॥१०५॥

श्रीगोदा शिबिकारूढा वैष्णवैः कृतमङ्गला
महता वैभवेनैव देशिकानुज्ञया तदा ॥१०६॥

निचुलानगरात्तूर्णं प्रतस्थे रङ्गमुत्तमम्
श्रीवैष्णवाः पठन्तोऽग्रे प्रबन्धान् भगवत्परान् ॥१०७॥

अन्योन्याबद्धहस्ताश्च निर्ययुश्शुभ्रवाससः ॥१०८॥

तस्याः पार्श्वद्वये देव्याः उभौ भट्टेशवल्लभौ
विरेजतुर्महात्मानौ गोदासंरक्षणोद्यतौ ॥१०९॥

शिबिकायास्ततःपश्चात्कुर्वन्तः स्वस्तिवाचनम्
द्विजसंघाश्च शतशो रवेण महता तदा ॥११०॥

ततस्संकीर्तनपरा ब्राह्मणा मधुरस्वराः
गाननिर्जितगन्धर्वाः ययुर्भागवतास्ततः ॥१११॥

वेत्रहस्ताः प्रदृश्यन्ते शतशोऽथ सहस्रशः
शिबिकायाश्चतुर्दिक्षु सुवस्त्राश्चारुभूषणाः ॥११२॥

वाचामगोचरेणैव वैभवेन महत्यसौ
विवेश रङ्गनगरं सप्तप्राकारशोभितम् ॥११३॥

विचित्रतोरणवती विचित्रध्वजमालिनी
विचित्रचित्रदीपालिचित्रवीथी विराजते ॥११४॥

सा सप्तावरणान्यत्र प्रदक्षिणमथाकरोत
हेमाद्रिशिखराभानि चित्रसौधानि ताः स्त्रियः ॥११५॥

निर्जितामरसौन्दर्याः शिञ्जन्मञ्जीरभूषणाः
समारुह्याथ शतशो गोदादर्शनकौतुकाः ॥११६॥

ववृषुः पुष्पवर्षाणि गोदायाः शिबिकोपरि
सौधानि गोपुराण्याशु प्राकारान्मण्डपान् जनाः ॥११७॥

आरुह्य तस्थुस्ते सर्वे तदुत्सव दिदृक्षवः
तत्सर्वं जनसम्पूर्णमदृश्यत महाद्भुतम् ॥११८॥

एवं प्रदक्षिणं कृत्वा तत्रावरणसप्तकम्
आससादाञ्जसा गोदा श्रीमच्चन्दनमण्डपम् ॥११९॥

औत्सवो भगवांस्तत्र श्रीसुन्दरवराभिधः
विधाय मङ्गळस्नानं सर्वालंकारशोभितः ॥१२०॥

पुण्याहवाचनं कृत्वा चांकुरारोपणं तथा
विधिज्ञैर्ब्राह्मणैस्साकं वेदवेदान्तपारगैः ॥१२१॥

गोदागमनमाकांक्षन् तस्थौ तत्र स मण्डपे
समागतां स तां गोदां रङ्गेशो वीक्ष्य हर्षितः ॥१२२॥

सुमुहूर्ते सुलग्ने च द्विजदेवाग्निसन्निधौ
चकार पाणिग्रहणं गोदादेव्याः श्रियःपतिः ॥१२३॥

विवाहम् शेषहोमान्तं विधिज्ञैर्विप्रसत्तमैः
निर्वर्त्य विधिवत्सम्यग्विप्राशीः कृतमङ्गळः ॥१२४॥

प्रहर्षमतुलं प्राप श्रीसुन्दरवरस्तदा
रङ्गेशपाणिग्रहणात् गोदा परमहर्षिता ॥१२५॥

एवं स्वयंवरे गोदां वरणस्रक्करां तदा
रङ्गेशः प्रीतितः स्निग्धां दृष्ट्वा तां निकटे स्थितः ॥१२६॥

तया च पश्यतां तेषां वरणस्रग्वृतोऽभवत्
दृष्ट्वाथ विष्णुचित्तोऽपि वृतं श्रीरङ्गनायकम् ॥१२७॥

प्रेम्णा प्रत्युज्जगामाथ हृष्टश्च प्रणनाम च
पूजयामास चार्घ्यादिमधुपर्कादिभिर्हरिम् ॥१२८॥

सभार्यस्तमलंकृत्य वस्त्राभरणधेनुभिः
गन्धपुष्पाक्षतैः पीतैः उपवीतादिशोभितम् ॥१२९॥

पाणिग्रहविधानेन गोदाहस्तं च धारयन्
तस्मै परात्मने रङ्गनाथाय करमादरात् ॥१३०॥

तस्यास्समर्पयामास गोदायाः समलंकृतम्
मङ्गलाशासनैर्वेदपुराणै ऋषिकल्पितैः ॥१३१॥

तां च भूम्यंशसम्भूतां तस्मैत्वेवं समार्पयत्
ततश्चाग्निं प्रतिष्ठाप्य हावयामास वैष्णवैः ॥१३२॥

अग्नेस्समीपे गोदायाः पाणिभ्यां लाजहोमकम्
कारयित्वा रङ्गनाथः ब्राह्मणैश्च पुरस्कृतः ॥१३३॥

गोदां नवोढां संगृह्य भूषितां भूषणोत्तमैः
अगादग्रे स्वयं गोदा स्वयं पश्चाच्चलन् हरिः ॥१३४॥

सप्तप्रदक्षिणं कृत्वा मुमोद सह भार्यया
विष्णुचित्तो महायोगी दैवतैस्सह पूजितैः ॥१३५॥

कासाराद्यैर्योगिमुख्यैः विवाहं द्रष्टुमागतैः
तमनुज्ञाप्य संपूज्य भूषणादिभिरुज्ज्वलैः ॥१३६॥

रङ्गनाथं तन्निलयं प्रेषयामास गोदया
शेषतल्पे शयानं तं रङ्गेशं सेवितुं तदा ॥१३७॥

इयेष भक्त्या सा गोदा सत्वरं वरवर्णिनी
सर्वेषां पश्यतां तस्मात् गोदा चन्दनमण्डपात् ॥१३८॥

सुमुहूर्ते विनिर्गत्य प्रविश्यान्तःपुरं तदा
विधाय प्राञ्जलिर्भूत्वा तद्विमानप्रदक्षिणम् ॥१३९॥

संप्राप्य सहसा भक्त्या सन्निधिं रङ्गशायिनः
शेषतल्पे शयानं तमपश्यद्रङ्गशायिनम् ॥१४०॥

लावण्यं यत्तदेवाद्यं रङ्गेशस्य महाद्भुतम्
दृष्ट्वा दृष्ट्वाऽसकृत्सम्यगनुभूयानुभूय सा ॥१४१॥

शेषतल्पं समारुह्य तत्पादाब्जसमीपगा
नादृश्यत तदा देवी सर्वेषां पश्यतां सताम् ॥१४२॥

तं दृष्ट्वाश्चर्यमतुलं विस्मयं परमं ययुः
विष्णुचित्तो वल्लभश्च ते सर्वे पुरवासिनः ॥१४३॥

श्रीभूमिनीलागोदाभिः स तत्र रमितस्तदा
शयानो भोगिशयने तस्थौ मुक्तिप्रदो नृणाम् ॥१४४॥

अङ्गीकृत्याथ तां देवीं भगवान् रङ्गराट् तदा
विष्णुचित्तं समाहूय सर्वेषां शृण्वतां तदा ॥१४५॥

इत्युवाच प्रवाळोष्ठस्फुरद्दशनसुप्रभः
समुद्रराजवन्मेद्य श्वशुरोऽभूद् भवान् किल ॥१४६॥

तीर्थं प्रसादं मालां च शठकोपं च सादरम्
दापयित्वार्चकैस्सम्यक् श्वशुराय स रङ्गराट् ॥१४७॥

द्विपटं हाटकमयमाच्छाद्यात्यन्तसंभ्रमात्
वटपत्रशयानाय पूर्ववद्धन्विमङ्गळे ॥१४८॥

श्रीपुष्पतुलसीमालाकैंकर्यं प्रतिवासरम्
कुर्वंस्तत्रैव भट्टार्य सुखमास्स्व निरन्तरम् ॥१४९॥

इत्युक्त्वा भट्टनाथार्यं तदा प्रास्थापयद्धरिः
कृत्वा विवाहं भट्टार्यो गोदां संस्थाप्य तां हरौ ॥१५०॥

विषादप्रीतियुक्तात्मा तेन संप्रेषितस्तदा
राज्ञा वल्लभदेवेन चतुरङ्गबलैस्सह ॥१५१॥

धन्विनव्यपुरं प्राप्य पूर्ववत्सुखमास्थितः
ततो वल्लभराजोऽपि भट्टार्यं देशिकोत्तमम् ॥१५२॥

तं धन्विमङ्गले सम्यक् प्रतिष्ठाप्य महौजसम्
तेनानुज्ञापितो धीमान् प्रययौ मधुरां पुरीम् ॥१५३॥

विष्णुचित्तो महाभागः श्वशुरो रङ्गभूपतेः
तत्कैंकर्यं सदा कुर्वंस्तस्थौ दास्यैकजीवनः ॥१५४॥

वटपत्रशयानाय पूर्ववद्धन्विमङ्गले
गोदारङ्गेशकल्याणं ये कुर्वन्ति स्ववेश्मनि ॥१५५॥

तेषां च नित्यकल्याणं भविष्यत्यनिशं ध्रुवम्
कल्याणं ये प्रकुर्वन्ति गोदाकल्याणवासरे ॥१५६॥

कल्याणसहितास्सर्वे भवेयुस्सर्वदा नराः
श्रीभोगिदिवसे ये तु गोदारङ्गेशयोस्तदा ॥१५७॥

सम्यग्विवाहं कुर्वन्ति सम्पन्नास्तेऽनिशं भुवि
विष्ण्वालये गृहे वापि गोदाकल्याणमुत्तमम् ॥१५८॥

ये सेवन्ते महात्मानः श्रीमन्तस्ते सदा भुवि
देहान्ते च तथा विष्णोः सायुज्यं प्राप्नुवन्ति हि ॥१५९॥

गोदाचरित्रं सुमहद्विचित्रं समस्तसन्मङ्गलपूर्णपात्रम्
शृण्वन्ति ये भक्तियुताः पठन्ति सन्मङ्गलास्ते सततं भवेयुः॥१६०॥

स्वोच्छिष्टमालिकाबन्धगन्ध बन्धुरजिष्णवे
विष्णुचित्ततनूजायै गोदायै नित्यमङ्गळम ॥१६१॥

—o—

**Jananyacharya Indological Research Foundation**
#116, Sreesanudasa Nilayam, 15th Cross, AECS Layout, Sanjaynagar, RMV
2nd Stage, Bengaluru 560 094 , India. Hand Phone : 098450 13393
email : ayeenarasimhan@gmail.com, URL : www.srivaishnavan.com

## ನಮ್ಮ ಪ್ರಕಟಣೆಗಳು

೧. ಆಯಿ ಜನನ್ಯಾಚಾರ್ಯರು – ಜೀವನ ಮತ್ತು ಕೃತಿಗಳು (ಕನ್ನಡ)
೨. ಆಯಿ ಜನನ್ಯಾಚಾರ್ಯರು – ಜೀವನ ಮತ್ತು ಕೃತಿಗಳು (ತಮಿಳು)
೩. ಆಚಾರ್ಯ ಹೃದಯಮ್ – ಮೂಲಪಾಠ (ಕನ್ನಡ)
೪. ಗುರುಪರಂಪರಾ ತನಿಯನ್ (ಸಂಸ್ಕೃತ)
೫. ಯತೀಂದ್ರ ಪ್ರವಣ ಪ್ರಭಾವಮ್ (ಕನ್ನಡ)
೬. ಆಚಾರ್ಯ ಹೃದಯಮ್ – ಆಯಿ ಜನನ್ಯಾಚಾರ್ಯರ್ ವ್ಯಾಖ್ಯಾನ (ತಮಿಳು)
೭. ವಾಕ್ಯ ಗುರುಪರಂಪರಾ ವ್ಯಾಖ್ಯಾನ (ಕನ್ನಡ)
೮. ತಿರುಪ್ಪಾವೈ – ದ್ರಾವಿಡ–ಸಂಸ್ಕೃತ ವ್ಯಾಖ್ಯಾನ ಸಹಿತ (ಕನ್ನಡ)
೯. ಶ್ರೀ ಆಂಡಾಳ್ ಕಲ್ಯಾಣಮ್ (ಕನ್ನಡ/ಸಂಸ್ಕೃತ)

## ಬರಲಿರುವ ಗ್ರಂಥಗಳು

೧. ಅರುಳಿಚ್ಚೆಯಲ್ ರಹಸ್ಯಮ್ (ಕನ್ನಡ)
೨. ಸಪ್ತಗಾದೈ – ವ್ಯಾಖ್ಯಾನದೊಡನೆ (ಕನ್ನಡ)
೩. ಜ್ಞಾನಸಾರ ಪ್ರಮೇಯಸಾರ – ವ್ಯಾಖ್ಯಾನದೊಡನೆ (ಕನ್ನಡ)
೪. ವಿರೋಧಿ ಪರಿಹಾರಂಗಳ್ (ಕನ್ನಡ)
೫. ಪೆರುಮಾಳ್ ತಿರುಮೊಳಿ – ವ್ಯಾಖ್ಯಾನ ವಿವರಣೆಯೊಡನೆ (ಕನ್ನಡ)
೬. ಗುರುಪರಂಪರಾ ಪ್ರಭಾವಮ್ (ಕನ್ನಡ)
೭. ವಾರ್ತಾಮಾಲೈ – ವಿವರಣೆಯೊಡನೆ (ಕನ್ನಡ)
೮. ತಿರುಮಾಲೈ – ವ್ಯಾಖ್ಯಾನದೊಡನೆ (ಕನ್ನಡ)



ಭಗವದ್ರಾಮಾನುಜಾಚಾರ್ಯರು - ಮೇಲುಕೋಟೆ